ಈ ರೇಷ್ಮೆ ತಾನೇ ತಾನಾಗಿ 18 ನೆಯ ಶತಮಾನದಲ್ಲಿ ರೈತರಿಗೆ ಉಪಯುಕ್ತವಾದ ಒಂದು ಕಸಬಾಗಿ ಜನತೆಯಲ್ಲಿ ಬೆಳೆದುಬಂದಿತು. 18 ನೆಯ ಶತಮಾನದ ಅಂತ್ಯದಲ್ಲಿ ಸರ್ಕಾರದ ಗಮನವನ್ನು ಸೆಳೆದು, ಸರ್ಕಾರದಲ್ಲಿ ಒಂದು ಇಲಾಖೆಯನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಂಥ ಕೈಗಾರಿಕೆ ಅನಾದಿ ಕಾಲದಿಂದ ಬೆಳೆದುಕೊಂಡು ಬಂದಂಥದ್ದು. ಈ ದಿನ ಎರಡುಲಕ್ಷ ಸಂಸಾರಗಳಿಗೆ, ಒಂದು ಮಿಲಿಯನ್ ಜನ ಸಂಖ್ಯೆಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟು ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಸಹಾಯವಾದಂಥ ಕೈಗಾರಿಕೆ, ಪರದೇಶಗಳ ಕಾಂಪಿಟಿಷನ್ನಿಗೆ ಸಿಕ್ಕಿ ನಶಿಸಿಹೋಗದಂತೆ ಉಳಿಸಿಕೊಂಡು ಬರತಕ್ಕುದು ಸರ್ಕಾರದ ಕರ್ತವ್ಯ. ಟಾರಿಫ್ ಕಮಿಷನ್ನಿನವರು ಈ ಒಂದು ಕೈಗಾರಿಕೆಯ ನೆರವಿಗೆ 1910 ರಿಂದ ಈಚೆಗೆ ಬಾರದಿದ್ದ ಪಕ್ಷದಲ್ಲಿ, 1957 ರಲ್ಲಿ ಇದರ ಹೆಸರು ಇಲ್ಲದಂತೆಯೇ ಆಗುತ್ತಿತ್ತು. ಅವರ ಒಂದು ನೆರವಿನಿಂದ ಇನ್ನೂ ಈ ರೇಷ್ಮೆ ಬೆಳೆ ಅಥವ ಕೈಗಾರಿಕೆ ಉಳಿದುಕೊಂಡು ಬರಲಿಕ್ಕೆ ಸಾಧ್ಯವಾಗಿದೆ. ಎಷ್ಟು ದಿವಸಗಳತನಕ ಹೊರದೇಶಗಳಿಂದ ಬರತಕ್ಕಂಥ ರೇಷ್ಮೆ ಮೇಲೆ ಹೆಚ್ಚಾದ ಸುಂಕವನ್ನು ವಿಧಿಸಿ ನಮಗೆ ಒಂದು ನೆರವು ಕೊಡುವುದಕ್ಕೆ ಸಾಧ್ಯವಾಗುತ್ತದೆ? ಹೊರದೇಶದಿಂದ ಬರತಕ್ಕಂಥ ರೇಷ್ಮೆ ಮೇಲೆ ಸುಮಾರು 30 ಪರ್ಸೆಂಟ್‌ನಷ್ಟು ಟ್ಯಾಕ್ಸನ್ನು ವಿಧಿಸುತ್ತಾ ಇದ್ದೇವೆ ಆದ್ದರಿಂದಲೇ ನಮ್ಮ ರೇಷ್ಮೆಯನ್ನು ಲುಕ್ಸಾನು, ಆಗದ ಬೆಲೆಯಲ್ಲಿ ಮಾಡುವುದಕ್ಕೆ ಸಾಧ್ಯವಾಗಿದೆ ಮತ್ತು ಅದು ಇನ್ನೂ ಉಳಿದುಕೊಂಡು ಬಂದಿದೆ. ನಮ್ಮ ಮಿತ್ರರು ತಿಳಿಸಿರುವಂತೆ ಸ್ಪನ್‌ಸಿಲ್ಕ್ ಮಿಲ್ಸ್ ಮತ್ತು ನೇಯಿಗೆಯ ಉದ್ಯಮ ಇವುಗಳು ರೇಷ್ಮೆ ವ್ಯವಸಾಯದಿಂದ ಬೇರ್ಪಟ್ಟು ಉದ್ಧಾರವಾಗಲಿಕ್ಕೆ ಅಥವಾ ಜೀವಿಸಿರಲಿಕ್ಕೆ ಸಾಧ್ಯವಿಲ್ಲ. ರೇಷ್ಮೆ ಕೈಗಾರಿಕೆ ರೇಷ್ಮೆ ವ್ಯವಸಾಯವನ್ನು ಹೊಂದಿಕೊಂಡಿದೆ. ರೇಷ್ಮೆ ವ್ಯವಸಾಯ ಉತ್ತಮಪಡದೆ ಇದ್ದರೆ, ರೇಷ್ಮೆ ಕೈಗಾರಿಕೆ ಬೆಳೆಯುವುದಿಲ್ಲ. ರೇಷ್ಮೆ ಕೈಗಾರಿಕೆ ಸರಿಯಾದ ವ್ಯವಸ್ಥಿತ ರೀತಿಯಲ್ಲಿ ನಡೆಯದೆ ಇದ್ದರೆ ರೇಷ್ಮೆ ವ್ಯವಸಾಯ ಉಳಿಯಲಿಕ್ಕೆ ಸಾಧ್ಯವಿಲ್ಲ. ಹೀಗೆ ಒಂದಕ್ಕೊಂದು ನೇರವಾದ ಸಂಪರ್ಕವಿದ್ದು ರೇಷ್ಮೆ ವ್ಯವಸಾಯ ಮತ್ತು ರೇಷ್ಮೆ ಕೈಗಾರಿಕೆ ಇವೆರಡೂ ಸಹಿತ ಒಂದೇ ವಿಭಾಗದಲ್ಲಿ ಒಂದನ್ನೊಂದು ಅನುಸರಿಸಿ ಬೆಳೆಯಬೇಕಾಗಿದೆ. ಆದುದರಿಂದ ನಾನು ಸಲಹೆಮಾಡುತ್ತೇನೆ; ನಮ್ಮ ಸ್ನೇಹಿತರು ಸೂಚಿಸಿರುವಂತೆ ಕೇವಲ ಫಿಲೇಚರ್ಸ್, ಸ್ಪನ್ ಸಿಲ್ಕ್‌ಮಿಲ್ಸ್ ಹಾಗೂ ಸರ್ಕಾರಿ ನೇಯ್ಗೆ ಕಾರ್ಖಾನೆಗೆ ಸಂಬಂಧಪಟ್ಟಂಥ ಬಾಡಿ ರಚನೆಯಾಗುವುದಕ್ಕಿಂತ ಇವುಗಳನ್ನೂ ಮತ್ತು ರೇಷ್ಮೆ ವ್ಯವಸಾಯವನ್ನೂ ಒಳಗೊಂಡಿರತಕ್ಕ ಪೂರ್ಣ ಇಲಾಖೆಯನ್ನು administer ಮಾಡತಕ್ಕ ಒಂದು ಅಟಾನಮಸ್ ಬಾಡಿ ಆಗಬೇಕು ಎಂದು ಒತ್ತಾಯಪಡಿಸುತ್ತೇನೆ.

ರೇಷ್ಮೆ ತಯಾರಾಗಬೇಕಾದರೆ ಗೂಡು ಬೇಕು. ಗೂಡು raw material ಎಂದರೆ ಕಚ್ಚಾವಸ್ತು. ಹೆಚ್ಚಿನ ಫಲ ಅಥವಾ ಹೆಚ್ಚಿನ ತೊಂದರೆ ಈ ಕೈಗಾರಿಕೆಯಲ್ಲಿ ಒದಗತಕ್ಕದ್ದು ಗೂಡನ್ನು ಬೆಳೆಸುವುದಕ್ಕೆ ಮುಂಚೆ. ಗೂಡನ್ನು ಬೆಳೆಸುವುದಕ್ಕೆ ಹಿಂದಿನ ತರಗತಿಯಲ್ಲಿ ಮಾತ್ರ ಇದಕ್ಕೆ ಹೆಚ್ಚು ಧಕ್ಕೆ ಬರುವಕಾರಣ ವುಂಟು. ರೇಷ್ಮೆ ಕೈಗಾರಿಕೆ ಬೇರೆ ಕೈಗಾರಿಕೆಗಳಂತಲ್ಲ. ರೇಷ್ಮೆ ಕೈಗಾರಿಕೆ ಬೇರೆ ಕೈಗಾರಿಕೆಗಳಹಾಗೆ ತಯಾರಿಸತಕ್ಕ ಪದಾರ್ಥದ ಮೇಲೆ ಅವಲಂಬಿಸುವುದಿಲ್ಲ, ಸಿಕ್ಕತಕ್ಕ ಪದಾರ್ಥಗಳಮೇಲೆ ಅವಲಂಬಿಸುವುದಿಲ್ಲ.

ರೇಷ್ಮೆ ಕೈಗಾರಿಕೆ ಕಲವು ಜೀವಿತ ವಸ್ತುಗಳ ಎಂದರೆ ಹುಳುಗಳಿಂದ ನಿರ್ಮಿತವಾಗುವ ವಸ್ತುವಿನಮೇಲೆ ಅವಲಂಬಿಸಿರುತ್ತದೆ, ಈ ಹುಳುಗಳ ಜೀವನದ ಪ್ರಮಾಣ ಕೇವಲ 35 ದಿನಗಳು ಮಾತ್ರ. ಮೊಟ್ಟೆಯಿಂದ ಹುಳುವಾಗಿ 22 ದಿವಸ ಸೊಪ್ಪನ್ನು ಉಂಡು 23--24 ನೇಯ ದಿವಸ ಕೋಶಾವಸ್ಥೆಯನ್ನು ಹೊಂದುತ್ತದೆ. ಕೋಶಾವಸ್ಥೆಯಲ್ಲಿರುವಾಗ ಕೋಶವನ್ನು ರೀಲಿಂಗಿಗೆ ಉಪಯೋಗಿಸಿ ರೇಷ್ಮೆಯನ್ನು ಉತ್ಪತ್ತಿಮಾಡತಕ್ಕ ಕೈಗಾರಿಕೆ ಇದು. ಹುಳುಗಳಿಗೆ ಅನೇಕ ರೀತಿಯಿಂದ ಧಕ್ಕೆ ಬರುವುದಕ್ಕೆ ಅವಕಾಶವಿದೆ. ಕೇವಲ ಅಲ್ಪವಾಗಿ ಹವಾಗುಣದಲ್ಲಿ ವ್ಯತ್ಯಾಸವಾದರೂ ಸಹಿತ ಈ ಹುಳ ಜೀವಸಹಿತ ಇರಲಿಕ್ಕೆ ಸಾಧ್ಯವಿಲ್ಲ. ಹಾಗೇನಾದರೂ ಆದ ಸಂದರ್ಭದಲ್ಲಿ ಅದನ್ನು ನಾವು ಉಳಿಸಿಕೊಳ್ಳಲಿಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಇದನ್ನು ರಕ್ಷಣೆ ಮಾಡುವುದಕ್ಕೆ ಒಂದೇ ಒಂದು ಮಾರ್ಗವೆಂದರೆ ಈ ಹುಳುಗಳಿಗೆ ಯಾವ ಒಂದು ರೋಗವೂ ಬರದಂತೆ ಇಟ್ಟುಕೊಳ್ಳಬೇಕಾದದ್ದು. ಈ ಹುಳುವಿನ ಜೀವಿತ ಕಾಲದ ಕೇವಲ 35 ದಿವಸಗಳಲ್ಲಿ ಏನಾದರೂ ಒಂದು ರೋಗ ಹುಳುವಿಗೆ ಸಂಭವಿಸಿದ್ದೇ ಆದರೆ ಅದನ್ನು ವಾಸಿಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಇದರಿಂದ ಬೆಳೆದಂಥ ಪೂರ್ತಿ ಬೆಳೆ ನಾಶವಾಗುತ್ತದೆ; ಮತ್ತು ಶೇಕಡ 30-40 ರಷ್ಟು ಬೆಳೆ ಕಡಮೆಯಾಗುತ್ತದೆ. ಈ ಹುಳುವಿನ ಜೀವನ ಒಂದು ಸೊಪ್ಪಿನಿಂದ. ಸೊಪ್ಪಿನಲ್ಲಿ nutrition ಉಳಿಸಿಕೊಂಡು ಬರಬೇಕಾದ್ದು ರೈತನ ಕರ್ತವ್ಯ. ಆದಕ್ಕಾಗಿ ಪರಿಣತರಿಂದ ಹೆಚ್ಚಿನ ಸಂಶೋಧನೆಮಾಡಿಸಿ, ಅವರ ಮುಖಾಂತರ ರೈತರು ಅನುಸರಿಸಬೇಕಾದ ನೀತಿ ನಿಯಮಗಳಲ್ಲಿ ಅವರಿಗೆ ಎಚ್ಚರಿಕೆ ಕೊಡಬೇಕಾದದ್ದು ಅಗತ್ಯ. ಆದ್ದರಿಂದಲೇ 1948ರಲ್ಲಿ ನಡೆದಂಥ ಸೆಮಿನಾರ್ ಮೈಸೂರಿನಲ್ಲಿ ಸಂಶೋಧನಾ ಕೇಂದ್ರವನ್ನು ಮಾಡುವುದಕ್ಕೆ ಹದಿಮೂರು ಲಕ್ಷ ರೂಪಾಯಿಗಳ ನೆರವನ್ನು ಕೇಂದ್ರ ಸರ್ಕಾರದಿಂದ ಪಡೆದು ಅವರ ನೇತೃತ್ವದಲ್ಲಿ ಮಂಜೂರಾತಿಯನ್ನು ತೆಗೆದುಕೊಂಡು ಕಾರ್ಯಾಚರಣೆಗೆ ತರಲಾಯಿತು. ಆದರೆ ಹತ್ತು ವರ್ಷಗಳಾದರೂ ಸಹಿತ ಆ ಸಂಶೋಧನಾ ಕೇಂದ್ರವನ್ನು ನಿರ್ಮಿಸಲಿಕ್ಕೆ ಸಾಧ್ಯವಾಗಿಲ್ಲ ಮತ್ತು ಅದರ ಫಲವನ್ನು ಅನುಭವಿಸಲಿಕ್ಕೆ ಶಕ್ಯವಾಗಿಲ್ಲ. ಹೀಗೆ ನ್ಯೂನತೆಗಳನ್ನು ನಾವು ಎಣಿಸಿಕೊಂಡು ಹೋಗಬಾರದು. ಆಗಿಂದಾಗ್ಗೆ ಭೂಮಿಯಲ್ಲಿರತಕ್ಕ nutritive ingredients, ಭೂ ಸತ್ವವನ್ನು ಯಾವ ರೀತಿ ಉಳಿಸಿಕೊಂಡು ಬರಬೇಕು ಎನ್ನುವುದಕ್ಕೆ ಹೆಚ್ಚಿನ ಮಾಹಿತಿಯನ್ನು ರೈತರಿಗೆ ಕೊಡಬೇಕಾಗುತ್ತದೆ. ಈ ಎಲ್ಲ ಲೋಪದೋಷಗಳನ್ನೂ ಸರಿಪಡಿಸಲಿಕ್ಕೆ ನಮ್ಮ ಮೈಸೂರು ಸರ್ಕಾರದಲ್ಲಿ ಅನೇಕ ಯೋಜನೆಗಳನ್ನು ತಯಾರು ಮಾಡಿ ಆಗಿಂದಾಗ್ಗೆ 43 ಲಕ್ಷ ರೂಪಾಯಿಗಳ ಕೇಂದ್ರದ ನೆರವನ್ನೂ ಪಡೆದಿದ್ದಾರೆ. ಅವುಗಳಲ್ಲಿ ಮುಖ್ಯವಾದುವು ಒಂದನೆಯದು ಸಂಶೋಧನೆ, ಎರಡನೆಯದು ಗ್ರಾಫ್ಟು ಮುಜೇನ ಉತ್ತಮ ದರ್ಜೆಯ ಸೊಪ್ಪನ್ನು ಬೆಳೆಯತಕ್ಕದ್ದು, ಮೂರನೆಯದು ಸುಲಭ ದರದಲ್ಲಿ ಬಿತ್ತನೆ ಕೇಂದ್ರಗಳಲ್ಲಿರತಕ್ಕ ರೈತರಿಗೆ ಚಂದ್ರಿಕೆಗಳನ್ನೂ--ಎಂದರೆ ಹುಳುಗಳನ್ನು ಸಾಕಿ ಗೂಡುಗಳನ್ನು ಕಳಿಸಲಿಕ್ಕೆ ಉಪಯೋಗಿಸುವುದು—ಒದಗಿಸಲಿಕ್ಕೆ ಒಂದು ಯೋಜನೆ, ಉತ್ತಮ ದರ್ಜೆಯ ಸೊಪ್ಪನ್ನು irrigated garden ಮುಖಾಂತರ ಬೆಳೆಯುವಂತಾಗಲು subsidies and loans to the rearers in the seed area ಎಂದು ಒಂದು ಯೋಜನೆ, ಗ್ರೇನಿಯರ್ ಸಹಿತ ಒಳ್ಳೆಯ ವಾತಾವರಣ, ಹವಾಮಾನವನ್ನು ಒಳಗೊಂಡಿರುವಂತೆ ಮನೆಗಳಲ್ಲಿಯೇ ಮೊಟ್ಟೆಯನ್ನು ತಯಾರುಮಾಡಬೇಕೆಂಬ ಅಭಿಪ್ರಾಯದಿಂದ ಸಬ್ಸಿಡಿಗಳನ್ನು ಕೊಡಲಿಕ್ಕೆ ಒಂದು ಯೋಜನೆ, ನಮ್ಮಲ್ಲಿರತಕ್ಕ ಐದು ಸಾವಿರ ಚರಕಗಳನ್ನು replace ಮಾಡಿ domestic basins replaceಮಾಡಲಿಕ್ಕೆ ಒಂದು ಯೋಜನೆ, ಹೀಗೆ ಐದಾರು ಯೋಜನೆಗಳನ್ನು ಕಾರ್ಯಗತಮಾಡಲಿಕ್ಕೆ ಮೂರು ವರ್ಷಗಳಿಂದ ಕೈಹಾಕಿದ್ದಾರೆ. ಆದರೆ ಈಗ ಆಗಿರತಕ್ಕದ್ದು ಏನೆಂದರೆ ಇವುಗಳಲ್ಲಿ ಯಾವುದೂ ಕಾರ್ಯರೂಪಕ್ಕೆ ಬಂದಿಲ್ಲ. ಎಲ್ಲವೂ ಇನ್ನೂ ಯೋಜನೆಗಳ ರೂಪದಲ್ಲಿಯೇ ಇವೆ. 1952ರ ಒಳಗಾಗಿ ನಾವು ಸ್ವಲ್ಪವಾದರೂ ಈ ಕೈಗಾರಿಕೆಯನ್ನು ಅಭಿವೃದ್ಧಿಯ ಕಡೆ ತಂದಿದ್ದೇವೆ, ಸ್ವಲ್ಪವಾದರೂ cost of production ಇಳಿಸಿದ್ದೇವೆಂಬ ವಿಷಯವನ್ನು ಸೆಂಟ್ರಲ್ ಸಿಲ್ಕ್ ಬೋರ್ಡ್ ಮತ್ತು ಟಾರಿಫ್ ಕಮಿಷನ್ ಅವರ ಗಮನಕ್ಕೆ ತರದೆಹೋದರೆ ಪ್ರೊಟೆಕ್ಷನ್ ಕೊಡುವುದಿಲ್ಲವೆಂದು ಮೊನ್ನೆ ತಾನೇ ಕಡ್ಡಾಯವಾಗಿ ಹೇಳಿದ್ದಾರೆ.

ಶ್ರೀ ಟಿ. ಮರಿಯಪ್ಪ.—ಅವರು ಎಷ್ಟು ದಿವಸ ಕೊಡುತ್ತಾರೆ ?

ಶ್ರೀ ಜೆ. ವೆಂಕಟಪ್ಪ.—ಕೊಡಲಿಕ್ಕೆ ಸಾಧ್ಯವಿಲ್ಲ. It is not fair on our part to ask for protection for ever. It is necessary to take steps to develop the industry. If necessary the rules would have to be made rigid. The industry should flourish.

ಈಗ ಹಾಕಿರತಕ್ಕ ಯೋಜನೆಗಳ ಪೈಕಿ ಸಂಶೋಧನೆಯ ವಿಷಯ ಆಗಲೇ ಹೇಳಿದ್ದೇನೆ. ಇನ್ನೂ ಬಹುಶಃ ಹೆಚ್ಚು ತ್ವರೆಯಿಂದ ಮಾಡಿದರೂ ಕಟ್ಟಡ ಪೂರೈಸಬೇಕಾದರೆ ಒಂದೆರಡು ವರ್ಷವಾದರೂ ಬೇಕು. ಹೀಗಾಗಬಾರದು.

ಗ್ರಾಫ್ಟ್ಸ್ ಹೆಚ್ಚು ಹೆಚ್ಚಾಗಿ ಬೆಳೆಯಬೇಕು. ಇದರಿಂದ ಹೆಚ್ಚಿಗೆ ರೇಷ್ಮೆಯನ್ನು ಬಿಚ್ಚತಕ್ಕ ಗೂಡುಗಳಿಗೆ ಸಹಾಯವಾಗದಿದ್ದರೂ ರೇಷ್ಮೆಯನ್ನು ಬಿಚ್ಚತಕ್ಕ ಗೂಡುಗಳ ಉತ್ಪತ್ತಿಗೆ ಮುಖ್ಯವಾಗಿ ಬೇಕಾಗಿರತಕ್ಕ ಉತ್ಕೃಷ್ಟವಾದ, ಉತ್ತಮದರ್ಜೆಯ seed cocoons ತಯಾರುಮಾಡಲಿಕ್ಕೆ ಬೇಕಾದ ಒಂದು ಮುಖ್ಯ ಅಂಶ ಇದರಲ್ಲಿದೆ. ಗ್ರಾಫ್ಟ್ಸ್ ಬೆಳೆಸಿ ಅವುಗಳ ಮುಖಾಂತರ ಉತ್ತಮ ದರ್ಜೆಯ ಹೆಚ್ಚಿನ, ಅತ್ಯಾವಶ್ಯಕವಾದಂಥ ಪದಾರ್ಥಗಳನ್ನೊಳಗೊಂಡಿರುವಂಥ ಸೊಪ್ಪನ್ನು ಪಡೆದು ಉತ್ತಮ ದರ್ಜೆಯ ಬಿತ್ತನೆಯನ್ನು ಉಳಿಸಿಕೊಂಡು ಬರಲಿಕ್ಕೆ ಸಾಧ್ಯವಾಗುತ್ತದೆ. ಈಗಾಗಲೇ ನನ್ನ ಅನುಭವದಲ್ಲಿರುವಂತೆ ಈ ಗ್ರಾಫ್ಟ್ಸ್ ಮುಜೇನ ಬಿತ್ತನೆಯನ್ನು ಬೆಳೆಯುತ್ತಿದ್ದಾರೆ. ಆ ಭಾಗದಲ್ಲೆಲ್ಲ ಉತ್ತಮವಾದ ಫಲಿತಾಂಶಗಳು ಬಂದಿವೆ. ಉತ್ತಮವಾದ ಗೂಡನ್ನು ನಾನೇ ಕಣ್ಣಾರೆ ನೋಡಿದ್ದೇನೆ. ಅವುಗಳಲ್ಲಿ ಮಾನ್ಯ ಮಿತ್ರರು ಹೇಳಿದಂತೆ ಉಳಿಸಿಕೊಂಡು ಬರಬೇಕಾದರೆ ಗ್ರಾಫ್ಟ್ಸಿಂದಲೇ ಸಾಧ್ಯ. ನಮ್ಮ ನಾಡಿನಲ್ಲಿ ಮೊದಲಿನಿಂದಲೂ ಇರುವಂಥ ಸಾಲು ಕಡ್ಡಿಯಿಂದ ಸಾಧ್ಯವಿಲ್ಲ. ಮಳೆಗಾಲದಲ್ಲಿ ಭೂಮಿಯ ಮೇಲಿನ ಧೂಳು ಎಲೆಗಳ ಮೇಲೆ ಕುಳಿತು, ಆ ಸೊಪ್ಪನ್ನು ತಿಂದ ಅನೇಕ ಹುಳುಗಳಿಗೆ ರೋಗ ಬರುವುದೂ ಉಂಟು. ಇದನ್ನು ತಪ್ಪಿಸುವುದಕ್ಕೆ grafts ಮುಖಾಂತರ ಸೊಪ್ಪನ್ನು ಬೆಳಸಿ ನಮ್ಮ ಬಿತ್ತನೆಯನ್ನು ಉಳಿಸಿಕೊಂಡು ಬರಬೇಕು ಮತ್ತು

(ಶ್ರೀ ಜೆ. ವೆಂಕಟಪ್ಪ)

ಗ್ರಾಫ್ಟ್ಸ್ ಮುಖೇನ ಉತ್ತಮ ದರ್ಜೆಯ ಬಿತ್ತನೆಯನ್ನು ಸಹ ಹೆಚ್ಚುಕಾಲ ನಿರ್ಭಯವಾಗಿ ಉಪಯೋಗಿಸಿಕೊಳ್ಳಲಿಕ್ಕೆ ಸಾಧ್ಯವಿದೆ. ಇದರಿಂದ ಈಗ ನಷ್ಟವಾಗುತ್ತಿರತಕ್ಕ ಸುಮಾರು ಶೇಕಡ 30-40 ಭಾಗವನ್ನು ಉಳಿಸಿಕೊಂಡು ಬರಬಹುದು.

ಬಿತ್ತನೆಗಳನ್ನು stabilise ಮಾಡುವುದು ಇದೆ. ಬಿತ್ತನೆಕಡೆಗಳಲ್ಲಿ ಅನೇಕ ರೈತರು ನೀರಿನ ವಸತಿಸಾಲದೆ ಕೇವಲ ಮಳೆಯ ಆಸರೆಯಿಂದ ಬೆಳೆಸ ಹೊರಟು, ಮಳೆಗಾಲದಲ್ಲಿ ಎರಡು ಮೂರು ಬೆಳೆ ಬೆಳೆದು ಬೇಸಗೆಯಲ್ಲಿ ಏನೂ ಇಲ್ಲದೆ ಇರುತ್ತಾರೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಒಣಗಿದಸೊಪ್ಪನ್ನೇ ಮೇಯಿಸುವುದೂ ಉಂಟು. ಈ ಪರಿಸ್ಥಿತಿಯನ್ನು ತಪ್ಪಿಸುವುದು ಅವಶ್ಯಕ. ನೀರಿನ ಅಭಾವದಿಂದ ಉತ್ಕೃಷ್ಟವಾದ ಸೊಪ್ಪನ್ನು ಬೆಳೆಯುವುದು ಕಷ್ಟ. ಇದನ್ನು ತಪ್ಪಿಸುವ ದೃಷ್ಟಿಯಿಂದ ಸರ್ಕಾರದವರು Subsidised Loans Scheme ಎಂದು ಒಂದು ಸ್ಕೀಮನ್ನು ತಯಾರುಮಾಡಿದ್ದರು. ಆದರೆ ಅವರ ನೆರವು ಇದುವರೆಗೆ ಯಾರಿಗೂ ಒದಗಿದಂತೆ ಕಾಣಲಿಲ್ಲ. ಇದಕ್ಕೆ ಕಾರಣ ಇಲಾಖೆಯಲ್ಲಿ ಶ್ರದ್ಧೆ ಬಹಳ ಕಡಮೆ ಇರುವುದು. ಇಲಾಖೆಯ ವಿಚಾರವನ್ನು ಪ್ರತ್ಯೇಕವಾಗಿ ಕಡೆಯಲ್ಲಿ ಹೇಳುತ್ತೇನೆ. ಸದ್ಯಕ್ಕೆ, ಈ ಅಶ್ರದ್ಧೆಯಿಂದಾಗಿ ಈಚೆಗೆ ನೂರಾರು ಅರ್ಜಿಗಳು ಬಂದರೂ ಕೇವಲ ಇಬ್ಬರು-ಮೂವರು ಜನರಿಗೆ ಮಾತ್ರ ಈ ಸ್ಕೀಮಿನ ನೆರವನ್ನು ಒದಗಿಸಿದ್ದಾರೆ. ಇನ್ನು ಮೇಲಾದರೂ ಹೀಗಾಗದಂತೆ ಹೆಚ್ಚಿನ ಶ್ರದ್ಧೆಯನ್ನು ಸರ್ಕಾರದವರು ವಹಿಸಿ, ರೈತರಿಗೆ ಬಜೆಟ್ಟಿನಲ್ಲಿ ಒದಗಿಸಿರುವಷ್ಟು ಹಣವಾದರೂ ವಿಲೆಯಾಗುವಂತೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇದೇರೀತಿಯಲ್ಲಿ Stabilised Loans ನ್ನು ಮೊಟ್ಟೆಯನ್ನು ತಯಾರುಮಾಡುವವರಿಗೂ ಕೊಡಬೇಕೆಂದು ಹೇಳಿ ಸೆಂಟ್ರಲ್ ಸಿಲ್ಕ್ ಬೋರ್ಡಿನವರು ಒಂದು ಸ್ಕೀಮನ್ನು ತಯಾರಿಸಿ 1958-59ನೆಯ ಇಸವಿಗೆ 20,000 ರೂಪಾಯಿಗಳನ್ನು ಒದಗಿಸಿದ್ದರು. ಈ ವರ್ಷ ನೋಡಿದರೆ, ಆ ಸ್ಕೀಮನ್ನೂ ಅಲ್ಲಿಗೇ ಕೈಬಿಟ್ಟರೆಂದು ಕಾಣುತ್ತದೆ. ಹೀಗೆ ಸ್ಕೀಮುಗಳನ್ನು ಅರ್ಧಂಬರ್ಧದಲ್ಲೇ ಬಿಡುವುದರಿಂದೇನು ಪ್ರಯೋಜನ? ಎಲ್ಲವನ್ನೂ ಅರಿತು ಮಾಡಿದ ಒಂದು ಸ್ಕೀಮು ಏಕೆ ಮಧ್ಯದಲ್ಲೇ ನಿಂತಿತೋ ಗೊತ್ತಿಲ್ಲ. ಕೊಟ್ಟಂತಹ 20,000 ರೂಪಾಯಿಗಳು ಏನಾದುವೋ ಗೊತ್ತಿಲ್ಲ. ಆದ್ದರಿಂದ ಗ್ರೇನ್ಯೂರ್ ರೇರರ್‌ಗಳಿಗೂ ಸಹಾಯ ಮಾಡುವ ಈ ಸ್ಕೀಮನ್ನು ಉಳಿಸಿಕೊಂಡು ಅದರ ಉಪಯೋಗವನ್ನು ಅವರಿಗೆ ದೊರಕಿಸಿಕೊಡಬೇಕೆಂದು ಹೇಳಿದ್ದೇನೆ.

ಆ ಮೇಲೆ Replacement of Charkha by domestic Basins ಗೆಂದು 1958-59 ನೆಯ ಇಸವಿಗೆ 60,000 ರೂಪಾಯಿಗಳನ್ನು ಒದಗಿಸಿದ್ದರು. ಇಂಡಿಯಾದೇಶದಲ್ಲಿ ತಯಾರಾಗುವ ಒಟ್ಟು 25 ಲಕ್ಷ ಪೌಂಡು ರೇಷ್ಮೆಯಲ್ಲಿ 18 ಲಕ್ಷ ಪೌಂಡು ನಮ್ಮ ದೇಶದಲ್ಲೇ ತಯಾರಾಗುತ್ತಿದೆ. ಈ ಪೈಕಿ ಫಿಲೇಚರಿನಿಂದ ತಯಾರಾಗುವಂಥಾದ್ದು ಕೇವಲ 3·5 ಲಕ್ಷದಷ್ಟುಮಾತ್ರ. ಉಳಿದ 15 ಲಕ್ಷ ಪೌಂಡುಗಳು ಚರಕವಿಂದಲೇ ತಯಾರಾಗುತ್ತಿದೆ ಎಂಬುದನ್ನು ಸರ್ಕಾರದವರು ಗಮನಿಸಬೇಕು. ಅಲ್ಲಿಗೆ ಕನಿಷ್ಠ ಪಕ್ಷ 5,000 ಚರಕಗಳು ಇದಕ್ಕಾಗಿ ಕೆಲಸಮಾಡುತ್ತಿರಬೇಕು. ಇಷ್ಟನ್ನೂ replace ಮಾಡಬೇಕಾದರೆ ವರ್ಷ ವರ್ಷೇ ಕೊಟ್ಟಿರುವ 80,000 ರೂಪಾಯಿಗಳ ಮೂಲಕವೇ ಆಗಬೇಕೆಂದರೆ ಏನಿಲ್ಲವೆಂದರೂ 15 ವರ್ಷ ಕೆಲಸಮಾಡಬೇಕಾಗುತ್ತದೆ. ಹೀಗಿರುವಲ್ಲಿ Tariff Commission ನವರು ಗೊತ್ತುಮಾಡಿರುವುದು 1960 ಎಂದಿದ್ದಾರೆ, ತಾವು ಮಾಡುವುದು 1975 ನೆಯ ಇಸವಿಯಾಗುತ್ತದೆ. ಹೀಗಾದರೆ ತಾವು ಹೇಗೆ ತಾನೆ ಚೈನಾ ಜಪಾನ್ ದೇಶಗಳವರಿಂದ ಆಗುತ್ತಿರುವ ಪೈಪೋಟಿಯನ್ನು ತಡೆಗಟ್ಟುತ್ತೀರಿ? ಇದನ್ನು ಅರಿತು, ಈ ಎರಡನೆಯ ಪಂಚವಾರ್ಷಿಕ ಯೋಜನೆ ಅವಧಿಯೊಳಗಾದರೂ ನಮ್ಮ ದೇಶದಲ್ಲಿರುವ ಎಲ್ಲಾ ಚರಕಗಳನ್ನೂ Domestie Basin ಗಳಾಗಿ ರೂಪಾಂತರಿಸಬೇಕೆಂದು ನಾನು ಹೇಳುತ್ತೇನೆ. ಇದಕ್ಕಾಗಿ ಕೇಂದ್ರ-ಸರ್ಕಾರದವರು ಕೊಟ್ಟಿರುವ ನೆರವನ್ನು ಉಪಯೋಗಿಸಿಕೊಳ್ಳಬೇಕಲ್ಲದೆ, ಬೇಕಾದರೆ ಇನ್ನೂ ಹೆಚ್ಚಿನ ನೆರವನ್ನೂ ಕೇಳಿದರೆ ಕೊಡುವುದಕ್ಕೆ ಸಿದ್ಧವಾಗಿರುವ ಕೇಂದ್ರ ಸರ್ಕಾರವನ್ನು ತಾವು ಒತ್ತಾಯಪಡಿಸಬೇಕು. ಆದ್ದರಿಂದ ಎಲ್ಲಾ ಚರಕಗಳನ್ನೂ 1962 ನೆಯ ಇಸವಿಯೊಳಗೇ Replace ಮಾಡುವುದಕ್ಕೆ ಪ್ರಯತ್ನಿಸಬೇಕೆಂದು ನಾನು ಹೇಳುತ್ತೇನೆ.

ಆಮೇಲೆ ಬಿತ್ತನೆ ಕೇಂದ್ರಗಳಲ್ಲಿ ರೈತರಿಗೆ Security ಇಲ್ಲವೆಂಬ ಅಂಶವನ್ನು ತಾವು ಗಮನಿಸಬೇಕು. ರೈತರು ಬೆಳೆದ ಗೂಡೆಲ್ಲವೂ ಬಿತ್ತನೆಗೇ ಹೋಗುತ್ತದೆಂಬ ನಂಬಿಕೆಯಿಲ್ಲ.

ಶ್ರೀ ಟಿ. ಮರಿಯಪ್ಪ.—Major Portion ಬೆಳೆಯುವುದೇ ರೀಲಿಂಗಿಗಾಗಿ.

ಶ್ರೀ ಜೆ. ವೆಂಕಟಪ್ಪ.—ಆದರೂ ಬೆಳೆದಂಥ ಗೂಡಿನಲ್ಲಿ ಎಷ್ಟುಮಟ್ಟಿನದಾದರೂ ಬಿತ್ತನೆಗೆ ಹೋಗುತ್ತದೆಂಬ ನಂಬಿಕೆಯಿಲ್ಲದೆ ರೈತರಿಗೆ ಬಹಳನಷ್ಟ ಉಂಟಾಗುತ್ತಿದೆ. ಇತ್ತ ಬೆಳೆದಂಥ ಹುಳುವನ್ನು ಬಿತ್ತನೆಗೇ ಉಪಯೋಗಿಸಬೇಕಾದಲ್ಲಿ ಅದನ್ನು ಬಿಸಲಿಗೆ ತೋರಿಸಲೇ ಬಾರದು. ನೆರಳಿನಲ್ಲೇ ಗೂಡುಕಟ್ಟಬೇಕು. ಅತ್ತ ರೀಲಿಂಗಿಗೆ ಉಪಯೋಗಿಸಬೇಕಾದರೆ ಬಿಸಲಿಗೆ ಹಾಕದೆ ಇದ್ದರೆ ಆಗುವುದೇ ಇಲ್ಲ. ಅರ್ಧ ಘಂಟೆಯಾದರೂ ಬಿಸಲಿಗೆ ಹಾಕದೆ ಇದ್ದರೆ ಹುಳುವಿನ ಮೂತ್ರ ಹೊರಗೆ ಹೋಗದೆ ರೇಷ್ಮೆಸಹಿತಲೇ ಅಂಟಿಕೊಂಡು ಒಳ್ಳೆಯ ರೇಷ್ಮೆ ತಯಾರಿಸುವುದಕ್ಕಾಗುವುದಿಲ್ಲ, ಹೀಗೆಂದು ಹೇಳಿ ಬಿಸಲಿಗೆ ರೈತ ತೋರಿಸುತ್ತಾನೆ. ಆಗ್ಗೆ, ಕಾರಣಾಂತರದಿಂದ ಬಿತ್ತನೆಗೆ Demand ಬಂತೆಂದರೆ, ಅದನ್ನು ಮಾರುವುದಕ್ಕಾಗುವುದಿಲ್ಲ. ಆದ್ದರಿಂದ ಬಿತ್ತನೆ ಕೇಂದ್ರಗಳಲ್ಲಿ ಒಂದು ವ್ಯವಸ್ಥೆಮಾಡಿ. "22 ದಿವಸಗಳಲ್ಲಿ ನಾವು ಬಿತ್ತನೆ ತೆಗೆದುಕೊಳ್ಳುತ್ತೇವೆ, ನಿಮಗೆ Loss ಆಗದಂತೆ Stabalise ಮಾಡಿ ತೆಗೆದುಕೊಳ್ಳುತ್ತೇವೆ" ಎಂದು ರೈತರಿಗೆ ಭರವಸೆಕೊಡಬೇಕು. ಸಾಮಾನ್ಯವಾಗಿ 1,000 ಪೌಂಡು ತಯಾರಾದರೆ 600 ಪೌಂಡು ರೀಲಿಂಗಿಗೆ ಹೋಗುತ್ತದೆ. ಇನ್ನುಳಿದ 400 ಪೌಂಡು ಬಿತ್ತನೆಮಾಡುವ pool ಗೆ ಬರುವಂತೆ ತಾವು ಒಂದು ವ್ಯವಸ್ಥೆಮಾಡಬೇಕು. ಇದಕ್ಕಾಗಿ ಬಿತ್ತನೆಯ ಗೂಡಿನ ರೇಟನ್ನು ಸ್ವಲ್ಪ ಮಟ್ಟಿಗೆ ಏರಿಸಿ, ರಾಟೆಗೆ ಹಾಕುವುದಕ್ಕೆ ಸ್ವಲ್ಪ ಇಳಿವರಿಮಾಡಿ, ಎಲ್ಲರಿಗೂ ಒಂದು average ದರದಲ್ಲಿ ಸಿಕ್ಕುವಂತೆ ವ್ಯವಸ್ಥೆಮಾಡಬೇಕು. ಇದು ಇಲಾಖೆಯವರು ಮಾಡಬೇಕಾದ ಕೆಲಸ.

ಆಮೇಲೆ ಮೊಟ್ಟೆಯನ್ನು ತಯಾರುಮಾಡುವ ವಿಧಾನದಲ್ಲಿ ಅನೇಕ ಲೋಪಗಳಿವೆ. ಸರ್ಕಾರದ ಕಾನೂನೇನೋ ಇದೆ. ಸರ್ಕಾರದವರು ಗ್ರೈನೇಜು

ಗಳನು ಯಾವಷರತ್ತುಗಳ ಪ್ರಕಾರ ಕೊಟ್ಟರುತಾರೋ ಅದರಂತೆ ಪ್ರತಿಯೊಬ್ಬನೂ ಸೂಕ್ಷ್ಮವಾಗಿ ಪರೀಕ್ಷಿಸಿ ಮೊಟ್ಟೆಯನ್ನು ತಯಾರುಮಾಡಬೇಕೆಂದಿದೆ. ಈಗಲಾದರೋ ಶೇಕಡ 80 ರಷ್ಟು ಜನ ಪರೀಕ್ಷೆಮಾಡಿ ಮೊಟ್ಟೆಯನ್ನು ಮಾಡುತ್ತಿಲ್ಲ. ಇಲಾಖೆಯಲ್ಲಿಯೂ ಸಹ ಗ್ರೇನ್ಯುಯರ್‌ಗಳಿಗೆ ಮೈಕ್ರೊಸ್ಕೋಪಿನಲ್ಲಿ ಹೇಗೆ ಇಟ್ಟುನೋಡಬೇಕೆಂಬ ತಿಳಿವಳಿಕೆಯುಳ್ಳವರೂ ಕೂಡ ಇದ್ದಾರೆ. ಇವರದೇ ಹೀಗಾದರೆ ಇನ್ನು ರೈತರಪಾಡೇನು ? ಸರ್ಕಾರದವರಿಗೆ ಪದೇ ಪದೇ ಈ ವಿಚಾರವನ್ನು ನಾವು ತಿಳಿಸಿದ್ದೇವೆ.

ಅಲ್ಲದೆ, 1948 ನೆಯ ಇಸವಿಯಿಂದ ನೋಡಿದಲ್ಲಿ, ಈ ಕೈಗಾರಿಕೆ ಬೆಳೆದಂತೆ ಇದರ ಬೆಳೆ ಕೆಡುವುದೇ ಜಾಸ್ತಿಯಾಗಿದೆ. ಇದಕ್ಕೆ ಮುಖ್ಯ ಕಾರಣ, ಭೂಮಿಯಲ್ಲಿ ಹತ್ತಾರು ವರ್ಷಗಳಿಂದ ಒಂದೇ ತೆರದ ಪೈರು ಮಾಡುತ್ತಿದ್ದು ಸತ್ವ ಕಡಮೆಯಾಗುತ್ತಿರುವುದು. ಗಿಡಗಳ ಬೆಳವಣಿಗೆಗೆ ಬೇಕಾದ Nitrogenous Material ಭೂಮಿಯಲ್ಲಿ ಕಡಮೆಯಾಗಿ ನಾವು ಬೆಳೆಯುವ ಸೊಪ್ಪಿನಲ್ಲಿ ಹೇಮೋಲಂಪ್ ಎಂಬ ವಸ್ತು ಕಡಮೆಯಾಗುತ್ತಿದೆ. ಇದರ ಪರಿಣಾಮವಾಗಿ ನಮ್ಮ ಹುಳುವಿನ ಬೆಳವಣಿಗೆ ಕುಂಠಿತವಾಗುತ್ತಿದೆ. ಇದನ್ನು ಸರಿಪಡಿಸದೆ ಇದ್ದರೆ ನಮ್ಮ Cost of Production ಅನ್ನು ಯಾವ ರೀತಿಯಲ್ಲೂ ಕಡಮೆ ಮಾಡುವುದಕ್ಕಾಗುವುದಿಲ್ಲ.

5 P.M.

ಈಗಿರುವ ಒಂದೂವರೆ ರೂಪಾಯಿನಂತಿರುವ ರೇಟನ್ನು ಒಂದೂ ಕಾಲು ರೂಪಾಯಿಗಾದರೂ ಇಳಿಸಿದರೆ ಇದನ್ನು ಮಾರುವುವರಿಗೆ ಅನುಕೂಲವಾಗುತ್ತದೆ. ರೆಂಡೆಟ್ಟು ಎಂದೇನೋ ಈಗ 18+9=27ರಂತೆ ಇದೆ. That is for reeling purposes and other things.

Sri T. MARIAPPA.—Cost of production should not go beyond 35.

ಶ್ರೀ ಜೆ. ವೆಂಕಟಪ್ಪ.—Cost of Production 35 ಎಂದೇನೋ ಈಗ ಬೆಳೆಯುವವರಿಗೆ ಕೊಡುತ್ತಾರೆ. ಹೊರದೇಶಗಳಿಂದ ಈಗ ಹತ್ತು ರೂಪಾಯಿ ಎಂಟು ಆಣೆ ಗಳಷ್ಟು ಟ್ಯಾಕ್ಸನ್ನು ಕೊಟ್ಟು 339 ರೂಪಾಯಿಗಳಂತೆ ಮಾರುತ್ತಿದ್ದಾರೆ. ಇದರಲ್ಲಿ ನಮ್ಮ ರೇಷ್ಮೆಗೂ ಹೊರದೇಶದಿಂದ ಬರತಕ್ಕ ರೇಷ್ಮೆಗೂ ಎಷ್ಟೋ ಅಂತರವಿರುವುದು ಗೊತ್ತಾಗುತ್ತದೆ. ಇದರಲ್ಲಿರತಕ್ಕ ಗುಣಗಳು ಎಂದರೆ, Elasticity, continuity, evenness. ಇವುಗಳೆಲ್ಲದರಲ್ಲಿಯೂ ನಮ್ಮ ರೇಷ್ಮೆಗೂ ಹೊರಗಡೆಯಿಂದ ಬರುವ ರೇಷ್ಮೆಗೂ ಕಂಪೇರ್ ಮಾಡಿದರೆ Strength, ಬಿಟ್ಟರೆ ಅದು ಚೆನ್ನಾಗಿರುವುದೇ ಕಾರಣವಾಗಿದೆ. ಒಂದು ಪೌಂಡು ನಮ್ಮ ರೇಷ್ಮೆಯಲ್ಲಿ ಬಹುಶಃ 26 ಗಜದಷ್ಟು ಬರಬಹುದು. ಹೊರಗಡೆಯಿಂದ ಬರುವರೇಷ್ಮೆಯಲ್ಲಿ 34-35 ಗಜಗಳಷ್ಟು ಬರಲಿಕ್ಕೆ ಸಾಧ್ಯವಾಗುತ್ತದೆ. ಇದರಲ್ಲಿ Strength ಕಡಿಮೆ. Eveness ಜಾಸ್ತಿ. ಅಲ್ಲಿಯ ತೂಕ ಕೂಡ ಬಹಳ ಲಘುವಾಗಿರುವುದರಿಂದ ನಮ್ಮ ಕಡೆಯ ರೇಷ್ಮೆಗಿಂತ ಸುಮಾರು ಆರೂವರೆ ರೂಪಾಯಿಗಳಷ್ಟು ಬೆಲೆಯಲ್ಲಿ ಕಡಿಮೆಯಾಗುತ್ತದೆ. ಈ ರೇಷ್ಮೆ ಕೈಗಾರಿಕೆ ಹೀಗಾಗಲು ಇದೊಂದು ಕಾರಣ. ನಮ್ಮ ರೇಷ್ಮೆಗೂ ಅವರ ರೇಷ್ಮೆಗೂ ಇರತಕ್ಕ ಅಂತರ ಎಂದರೆ ಕಡಿಮೆ ಖರ್ಚಿನಿಂದ ಹೆಚ್ಚು ಲಾಭ ಪಡೆಯಬಹುದು ಎನ್ನುವುದು ಇದರಿಂದ ಗೊತ್ತಾಗುತ್ತದೆ. •ಅದರಿಂದ ಜನಗಳು ಏನಾದರೂ ಒಂದು ರೀತಿ ಒತ್ತಾಯವನ್ನು ಸರಕಾರದ ಮೇಲೆ ತಂದು importನ್ನೂ ಪಡೆದು ಹೊರಗಿನಿಂದ ರೇಷ್ಮೆಯನ್ನು ತರಿಸುವ ಏರ್ಪಾಡು ಮಾಡುತ್ತಿದ್ದಾರೆ.

Tariff Commission ಮತ್ತು Central Silk Board ಇವರು ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ ನಮಗೆ 23 ರಿಂದ 25 ಲಕ್ಷ ಪೌಂಡುಗಳಷ್ಟು ಸೊಪ್ಪು ನಮ್ಮಲ್ಲಿ ಸಿಕ್ಕುತ್ತದೆ. ಆದ್ದರಿಂದ ಈ ಕೈಗಾರಿಕೆಗೆ, Self-sufficient ಆಗುವುದಕ್ಕೆ ಅವಕಾಶವಿದೆ. ಇಷ್ಟು ರೇಷ್ಮೆ ಬೆಳೆಯುವಷ್ಟು ಅವಕಾಶವಿದ್ದರೂ ಮೂರು—ನಾಲ್ಕು ಲಕ್ಷ ಪೌಂಡುಗಳಷ್ಟನ್ನು ಹೊರಗಿನಿಂದ ತರಿಸುತ್ತಾರೆ. ಈ ಕೈಗಾರಿಕೆಗಿರುವ ಕಷ್ಟವನ್ನು ತಪ್ಪಿಸಿ ನಮ್ಮ ದೇಶದಲ್ಲಿ ಈ ಕೈಗಾರಿಕೆಯನ್ನು ಉಪಯೋಗಕರವಾಗುವಂತೆ ಮಾಡದಿದ್ದರೆ ಇದರಿಂದ ಹೆಚ್ಚಿನ ಉಪಕಾರವಾಗಲಾರದು. ಹೀಗಾಗಿ ನಾವು ನಮ್ಮಲ್ಲಿ ಬೆಳೆಯತಕ್ಕ ರೇಷ್ಮೆಯ ಬೆಳೆಯನ್ನು ಉತ್ತಮಪಡಿಸಲು ಅನುಸರಿಸಬೇಕಾದಂತಹ ಎಲ್ಲ ಮಾರ್ಗಗಳನ್ನೂ ಅನುಸರಿಸದೆ ಬೆಳೆಯನ್ನು ಕಡಿಮೆಮಾಡಿಕೊಳ್ಳುತ್ತ ಹೋದರೆ ನಾವು ಖಂಡಿತವಾಗಿಯೂ ಈ ಕೈಗಾರಿಕೆಯನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ಎಕರೆ ಭೂಮಿಯಲ್ಲಿ ಈಗ ಬೆಳೆಯುತಕ್ಕ ಸೊಪ್ಪಿನ ಬೆಳೆಯನ್ನು ಇನ್ನೂ ಶೇಕಡ ಐವತ್ತರಷ್ಟು ಹೆಚ್ಚಿಗೆ ಬೆಳೆಯುವಷ್ಟು ಸೌಕರ್ಯಗಳನ್ನು ಒದಗಿಸಿಕೊಡಬೇಕು.

ಶ್ರೀ ಟಿ. ಮರಿಯಪ್ಪ.—ನಿಮ್ಮ ಕಡೆಗಳಲ್ಲಿ ಎಷ್ಟು ಬರುತ್ತದೆ.

ಶ್ರೀ ಜೆ. ವೆಂಕಟಪ್ಪ.—ನಾವು 35,000 ಪೌಂಡುಗಳಷ್ಟು ಬೆಳೆಯುತ್ತಿದ್ದೇವೆ. ಯಾರುಯಾರು personal cultivation ಇಟ್ಟುಕೊಂಡು ಹೆಚ್ಚಿನ ಶ್ರದ್ಧೆಯನ್ನು ವಹಿಸಿ ಮಾಡುತ್ತಾರೋ, ಅವರು 35,000 ಪೌಂಡಿಗಿಂತ ಕಡಿಮೆ ಬೆಳೆಯುತ್ತಿಲ್ಲ. 25,000 ಪೌಂಡಿಗಿಂತ ಕಡಿಮೆಯಾಗಿ ಯಾರೂ ಬೆಳೆಯುತ್ತಿಲ್ಲ.

There is difference between Japan cultivation and our cultivation. It is more advanced in Japan ನಮ್ಮಲ್ಲಿ ಕಟ್ಟಿನ ನಾಟಿಯೊಳಗೆ ಅದರೊಳಗಡೆ ಸೊಪ್ಪನ್ನು ಬೆಳೆಯುವಂತೆ ಏರ್ಪಾಡು ಮಾಡಲಾಗಿದೆ. It will be some lakhs, ಎಷ್ಟು cuttings ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. Graft varies from Rs. 200 and 400 depending upon the fertility of the soil.

Sri T. MARIAPPA.—Their production in Sidlaghatta area is great.

ಶ್ರೀ ಜೆ. ವೆಂಕಟಪ್ಪ.—ಇದೂ ಅಲ್ಲದೆ ಇನ್ನೊಂದು ಕಾರಣ, ಕೇವಲ ಎರಡು ಬೆಳೆ ಮಾತ್ರ ಬರುತ್ತದೆ. ಏಕೆಂದರೆ ನೀರು ಇರುವುದಿಲ್ಲ. ಇದರಿಂದ ನೆಲವೆಲ್ಲ ಒಣಗಿ ಹೋಗಿ ಐದು ಬೆಳೆ ಬರುವಕಡೆಗೆ ಎರಡು ಬೆಳೆ ಮಾತ್ರ ಬರುತ್ತದೆ. ಇದರಿಂದಾಗಿ ಈ ಬೆಳೆ ಬೆಳೆಯುವ ರೈತನಿಗೆ ಸಾಕಷ್ಟು ಬೆಲೆ ದೊರೆಯುತ್ತಿಲ್ಲ. ಬೇಸಿಗೆ ಕಾಲದಲ್ಲಿ ಈ ಬೆಳೆಯನ್ನು ಹೆಚ್ಚು ಬೆಳೆಯುವುದಕ್ಕಾಗಿ ಒಂದು ಮೂರು ವರ್ಷಗಳ ಸ್ಕೀಮೊಂದು ತಯಾರಾಗಿತ್ತು. ಅದರಿಂದ ರೈತರಿಗೆ ಯಾವ ವಿಧವಾದ ಸೌಲಭ್ಯವೂ ದೊರಕಲಿಲ್ಲ. ಬಹುಶಃ ಹೋದ ವರ್ಷ ಮೂಗೂರು, ಮಾಗಡಿ ಮತ್ತು ಕುಣಿಗಲ್ಲು ಈ ಕಡೆಗಳಲ್ಲಿ ಕೇವಲ ಐದಾರು ಜನರಿಗೆ ಮಾತ್ರ ಈ

(ಶ್ರೀ ಜೆ. ವೆಂಕಟಪ್ಪ)

ಸ್ಕೀಮಿನಿಂದ ಸೌಕರ್ಯ ದೊರೆತಿರಬಹುದು. ಬೆಳೆಯುವವರ ಸಹಾಯಕ್ಕಾಗಿ ಉತ್ತಮವಾದ ಯೋಜನೆಯನ್ನು ತರಬೇಕಾದುದು ಈ ಇಲಾಖೆಯ ಕರ್ತವ್ಯವಾಗಿರಬೇಕು. ನಾನು ಯೇಡ್‌ಡೆಡ್ ಗ್ರೇನ್ಯೂರುಗಳ ವಿಚಾರವಾಗಿ ಹೇಳುತ್ತಿದ್ದೆ. ಹಾಗೇ ಉತ್ತಮ ದರ್ಜೆ ಮೊಟ್ಟೆಯನ್ನು ತಂದು ಸರಿಯಾದ ಪರಿಣತರ ಹತ್ತಿರ ಇದನ್ನು ಪರೀಕ್ಷೆಮಾಡದೇ ರೈತರಿಗೆ ಹಂಚಿದರೆಒಳ್ಳೆಯದಾಗುವುದಿಲ್ಲ. ಎನ್ನುವ ಒಂದು ಭಾವನೆ ಬೆಳೆಯುವವರಿಗೆ ಇದೆ. ಹೀಗೆ ಮಾಡಲು ಈಗಿರತಕ್ಕ ಕಾನೂನಿನಲ್ಲಿ ಹೆಚ್ಚಿನ ಒಂದು ಸೌಕರ್ಯವನ್ನು ಒದಗಿಸಲಿಕ್ಕೆ ಆಗಿಲ್ಲ ಇದರಿಂದಾಗಿ ಹೆಚ್ಚಿನ ಅನುಕೂಲ ಬೆಳೆಯುವವರಿಗೆ ಸಿಗುತ್ತಿಲ್ಲ. ಗ್ರಾನೆರಿಗಳೂ ಸಾಕಾದಷ್ಟು ಇರುವುದಕ್ಕೆ ಸಾಧ್ಯವಾಗುತ್ತಿಲ್ಲ. ಸರಕಾರದವರು ಇದನ್ನೆಲ್ಲ ಪರಿಶೀಲಿಸಿ 1952ರಲ್ಲೇ "Silk Worm Seed Control and Distribution Act" ಎಂದು ತಂದು ಈ ಸಭೆಯ ಅನುಮೋದನೆ ಪಡೆದು ಇದನ್ನು ಜಾರಿಗೆ ತರಲು 28ನೇ ಆಗಸ್ಟ್ 1959ರಲ್ಲಿ ಆರ್ಡರಾಯಿತು. ಅದೇ ರೀತಿಯಾಗಿ ಕುಣಿಗಲ್ಲಿನಲ್ಲಿ ಹಿಂದೆ ಮಂತ್ರಿಗಳಾಗಿದ್ದ ಶ್ರೀಮಾನ್ ಸಿದ್ದವೀರಪ್ಪನವರು ಒಂದು ಸೆಂಟರನ್ನೂ ಜಾರಿಗೆ ತಂದರು. ಆಗಿನಿಂದ Seed Areaದಲ್ಲೆಲ್ಲ ಸ್ವಲ್ಪಮಟ್ಟಿಗೆ improvement ಆಗುತ್ತಿದೆ. ಆಗ ಒಂದು ಪೌಂಡಿಗೆ 620 ಇದ್ದದ್ದು ಈ ದಿನ 420ಕ್ಕೆ ಇಳಿದಿದೆ. ಇಷ್ಟೊಂದು ಇಳಿದರೂ ಈ ಕಾನೂನಿನ ಒಂದು ಸೌಲಭ್ಯವನ್ನು ಈ ಕೈಗಾರಿಕೆಯಲ್ಲಿ ನಿರತರಾಗಿರತಕ್ಕವರಿಗೆ ಒದಗಿಸಿ ಕೊಡುವುದಕ್ಕೆ ಈ ಇಲಾಖೆಗೆ ಸಾಧ್ಯವಾಗಲಿಲ್ಲ. ಸರಕಾರಕ್ಕೂ ಸಹ ಸಾಧ್ಯವಾಗಿಲ್ಲ. ಸರಕಾರದ ಮೇಲೆ pressureನ್ನು ತರಲು ಹೆಚ್ಚಿನ ಮಾಹಿತಿ ಹೊಂದಿದವರು ಇಲ್ಲದಿದ್ದುದರಿಂದ ಈ ಇಂಡಸ್ಟ್ರಿಯನ್ನು ಮುಂದಕ್ಕೆ ತರುವ ಸಾಹಸ ಮಾಡಿಲ್ಲ. ತಾವು 1957ರಲ್ಲೇ ಈ ಕಾನೂನನ್ನು ಎಲ್ಲ ಕಡೆಗಳಲ್ಲಿಯೂ ಜಾರಿಗೆ ತಂದಿದ್ದರೆ, ತಮಗೆ ಇಷ್ಟೊಂದು pressure ತರಲಿಕ್ಕೆ ಕಾರಣವಿರಲಿಲ್ಲ ಎಂದು ನನ್ನ ಭಾವನೆ. ಖಂಡಿತವಾಗಿ ಈ ಆಕ್ಟನ್ನು 1954ರಲ್ಲೇ ಎಲ್ಲಾ ಭಾಗಗಳಿಗೂ ತರುತ್ತಾರೆಂದು ನನಗನಿಸಿತ್ತು ಆದರೆ ಈ ಕೈಗಾರಿಕೆಯ ದುರ್ದೈವವೋ, ಅಥವಾ ಈ ಬೆಳೆಗಳಲ್ಲಿ ನಿರತರಾಗಿರುವ ಜನಗಳ ದುರ್ದೈವವೋ ಏನೋ ಈ ಆಕ್ಟನ್ನು ಎಲ್ಲಾ ಭಾಗಗಳಲ್ಲಿ ಇನ್ನೂ ಜಾರಿಗೆ ತಂದಿಲ್ಲ. 1956ರಲ್ಲಿ ಜಾರಿಗೆ ತಂದಿದ್ದೇವೆ ಎಂದು ಹೇಳಿ ಕೋಲಾರದ ಡಿವಿಜನ್ನಿನಲ್ಲಿ ಜಾರಿಗೆ ತರಲು ಪ್ರಯತ್ನ ಮಾಡಿದರು. 1958ನೇ ಜನವರಿಯವರೆಗೂ ಅಲ್ಲಿ ಸೌಕರ್ಯಗಳನ್ನೂ ಒದಗಿಸಿ ಕೊಡಲು ಬೇಕಾದ ಸಾಮಾನುಗಳನ್ನೂ purchase ಮಾಡಿದರು. ಹೆಚ್ಚು ಜನರಿಗೆ ಅನುಕೂಲಮಾಡಬೇಕೆಂದು ಮಾಡಿದರೂ ಇದರ ಅನುಕೂಲ ಆದದ್ದು ಕೊಂಚ ಜನಗಳಿಗೆ ಮಾತ್ರ. ಈ ರೀತಿಯಾಗಿ ಕಾನೂನು ಬಂದಿದ್ದರೂ ಹತ್ತು ಹದಿನಾಲ್ಕು ಸ್ಥಳಗಳಿಗೂ ಈ ಕಾನೂನು ಜಾರಿಯಲ್ಲಿವೆ ಎನ್ನುವುದು ನನಗೆ ಕಾಣಿಸುವುದಿಲ್ಲ.

It would have been sufficient to move an amendment order, that is, to apply for the entire State

ಇಷ್ಟುಮಾಡಿದ್ದರೆ ಸಾಕಾಗಿತ್ತು. ಬದಲಾವಣೆ ಹೊಂದಿ ಪ್ರತ್ಯೇಕವಾದ ಒಂದು ಕಾನೂನನ್ನು ತರುವ ಸ್ಥಿತಿಯಲ್ಲಿ ಇದೆಯೋ ಏನೋ ನನಗೆ ಭಾಸವಾಗುತ್ತಿದೆ. ಈ ಕಾನೂನಿನಲ್ಲಿರುವ ಅನುಕೂಲಗಳು ಮತ್ತು ನ್ಯೂನತೆಗಳ ಪರಿಚಯವನ್ನು ಮಾಡಿಸಿ ಕೊಟ್ಟಿದ್ದರೆ ಆ ನ್ಯೂನತೆಗಳನ್ನು ಸರಿಪಡಿಸಲಿಕ್ಕೆ ನಮಗೆ ಸ್ವಲ್ಪ ಮಟ್ಟಿಗಾದರೂ ಪ್ರಯೋಜನವಾಗುತ್ತಿತ್ತು. ಹಾಗೆ ಯೋಚನೆಮಾಡಿ ಒಂದು ಕಾನೂನಾಗಲು ಸರಕಾರ ಅವಕಾಶ ಕೊಡುತ್ತಿಲ್ಲ.

ಈ ಕಾನೂನನ್ನು ಜಾರಿಗೆ ತರದೆ ಹೋದಲ್ಲಿ ಖಂಡಿತ ಉತ್ತಮ ದರ್ಜೆಯ ಮೊಟ್ಟೆಯನ್ನು ರೈತನಿಗೆ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಇರುವಂತೆ ನಮಗೆ ಬೇಕಾದುದು ಆರುಕೋಟಿ disease free layings. ಅದರಲ್ಲಿ ಪರೀಕ್ಷೆ ಮಾಡಿದ್ದು ಎರಡುಕೋಟಿ ಮೊಟ್ಟೆ ಮಾತ್ರ. ಉಳಿದ ಮೂರು ನಾಲ್ಕು ಕೋಟಿ ಮೊಟ್ಟೆಯನ್ನು ಬೇರೆಯವರ ಕೈಯಿಂದ, ಅಂದರೆ, ಶಿಕ್ಷಣವನ್ನು ಪಡೆಯದೆ ಇರತಕ್ಕವರ ಕೈಯಿಂದ ಪಡೆದಿರುವುದು. ಅವು ಪರೀಕ್ಷೆಗೆ ಒಳಗಾಗದೆ ಇರತಕ್ಕದ್ದರಿಂದ ರೋಗ ಹೊಂದಿರತಕ್ಕ ಮೊಟ್ಟೆಗಳು ಆಗಿರಬಹುದು. ಇಂಥಾದ್ದು ರೈತನಿಗೆ ಸಿಕ್ಕಿ 30-40 ಪರ್ಸೆಂಟ್ ಬೆಳೆ ಕೊಡಲಿಕ್ಕೆ ಕಾರಣವಾಗಿದೆ. ಅದನ್ನು ಸರಿಪಡಿಸಿದ್ದೇ ಆದರೆ ರೈತನಿಗೆ ಆಗುವ ನಷ್ಟವನ್ನು ಉಳಿಸಿಕೊಳ್ಳಬಹುದು. ಈಗ ಪೂರ್ತಿ ಬೆಳೆ ತೆಗೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಹತ್ತು ಪರ್ಸೆಂಟ್ ಬಿಟ್ಟು 90 ಪರ್ಸೆಂಟ್ ಉತ್ತಮದರ್ಜೆ ಮೊಟ್ಟೆಯನ್ನು ತೆಗೆಯುವುದಕ್ಕೆ ಸಾಧ್ಯವಾಗುತ್ತದೆ. ಈ ಒಂದು ಕಾನೂನನ್ನು ಜಾರಿಗೆ ತರುವುದರಿಂದ ಕಾಸ್ಟ್ ಆಫ್ ಪ್ರೊಡಕ್ಷನ್ನು 20 ಪರ್ಸೆಂಟ್ ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಸಾಧಾರಣವಾಗಿ ವರ್ಷದಲ್ಲಿ ಒಂದೆರಡು ಬೆಳೆ ರೈತನಿಗೆ ಹಾಳಾಗಲಿಕ್ಕೆ ಈ ಒಂದು ಲೋಪ ಕಾರಣವಾಗಿದೆ. ಈ ಒಂದು ಅನಿವಾರ್ಯವಾಗಿ ಅಲ್ಲೋ ಇಲ್ಲೋ ಒಂದು ಬೆಳೆ ಹೋಗಲಿಕ್ಕೆ ಕಾರಣವಾಗಿದೆ. ಇಂಥಾ ಉಪಯುಕ್ತವಾದ ಕಾನೂನಿನ ಸೌಲಭ್ಯವನ್ನು ಚಾಮರಾಜನಗರ, ಕೋಲಾರ ಡಿವಿಜನ್ನಿಗೆ ಏತಕ್ಕೆ ಕೊಡಲಿಲ್ಲವೋ ಗೊತ್ತಿಲ್ಲ. ಏತಕ್ಕೆ ಸರ್ಕಾರ ಹಿಂಜರಿಯುತ್ತಿದೆ? ದಕ್ಷತೆ ಇಲ್ಲದೆ ಇರತಕ್ಕವರು ಈ ಇಲಾಖೆಯಲ್ಲಿದ್ದು ಈ ಕಾನೂನನ್ನು ಜಾರಿಗೆ ತಂದು ಶ್ರಮಪಡಬೇಕಾದ ಅವಶ್ಯಕತೆ ನಮಗೆ ಏನು ಎನ್ನುವ ಮನೋಭಾವ ಅವರಲ್ಲಿ ಬೆಳೆದಿರುವುದು ಕಾರಣವೆಂದು ನನಗನ್ನಿಸುತ್ತದೆ. ಖಂಡಿತವಾಗಿಯೂ, ದಕ್ಷರಾದ ಆಫೀಸರು ಇದ್ದರೆ ಅವರು 1958ನೇ ಇಸವಿಯಲ್ಲಿಯೇ ಇದನ್ನು ಜಾರಿಗೆ ತರುತ್ತಿದ್ದರು. ಅವರನ್ನು ನಾನು ಅನೇಕ ಸಲ ಕಂಡು ಮಾತನಾಡಿದ್ದರಲ್ಲಿ ಆ ಭಾಗದಲ್ಲಿ ಬಹಳ ತಿಕ್ಕಾಟ ಇದೆ ಎಂದು ಹೇಳಿದರು. ಅಷ್ಟೊಂದು ಜವಾಬ್ದಾರಿಯನ್ನು ಹೊರಲು ಸಾಧ್ಯವಾಗದೆ ಇರತಕ್ಕ ಆಫೀಸರುಗಳು ಆ ಇಲಾಖೆಯ ಸೂತ್ರಧಾರಿಯಾಗಿ ಕೆಲಸಮಾಡತಕ್ಕ ಅವಕಾಶ ಇರಬಾರದು. ಅವರನ್ನು ರಿಸರ್ಚ್ ಸ್ಟೇಷನ್ನಿಗೆ ಕಳುಹಿಸುವುದಕ್ಕೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು. ಶ್ರಮಪಡಬೇಕಾದ ಅವಶ್ಯಕತೆ ಮತ್ತು ಅವರಲ್ಲಿ ಇರತಕ್ಕ ಜಿಗುಪ್ಸೆ ಈ ಕಾನೂನು ಜಾರಿಗೆ ಬಾರದೆ ಇರುವುದಕ್ಕೆ ಕಾರಣ. ರಿಟೈರ್ ಆಗತಕ್ಕ ಕಾಲದಲ್ಲಿ ಡೈರೆಕ್ಟರ್ ಆಗಿ ಬರುತ್ತಾರೆ. ಕೇವಲ ಒಂದೆರಡು ವರ್ಷ ನಾನು ಇರತಕ್ಕದ್ದು, ನಾನು ಹೋದ ಮೇಲೆ ಜಾರಿಗೆ ತರುತ್ತಾರೋ ಬಿಡುತ್ತಾರೋ? ನಾನು ಅಷ್ಟೇಕೆ ಶ್ರಮವಹಿಸಬೇಕು ಎನ್ನುವ ಮನೋಭಾವ ಅವರಲ್ಲಿ ಬೆಳೆಯುತ್ತದೆ. ಅದಕ್ಕಾಗಿ ಮುಖ್ಯ ಮಂತ್ರಿಗಳಿಗೆ ಹೋದ ಸಲ ಕೊಟ್ಟ ರಿಪೋರ್ಟಿನಲ್ಲಿ ಸಲಹೆಮಾಡಿದ್ದೇವೆ. ನೀವು ಡೈರೆಕ್ಟರುಗಳನ್ನು ನೇಮಿಸುವಾಗ, ಹೆಚ್ಚಿನ ಶಿಕ್ಷಣದ ಅನುಭವ ಪಡೆದಿರತಕ್ಕಂಥವರನ್ನೂ ಮತ್ತು ಇನ್ನೂ ಹೆಚ್ಚಿನ ಕಾಲ ಸರ್ವೀಸಿನಲ್ಲಿ ಇರು

ತ್ತಾರೆ ಎನ್ನುವ ನಂಬಿಕೆ ಇರುವವರನ್ನೂ ಡೈರೆಕ್ಟರಾಗಿ ನೇಮಿಸುವುದು ಒಳ್ಳೆಯದು. ಈಗ ಆ ಇಲಾಖೆಯ ಮುಖ್ಯಾಧಿಕಾರಿಗಳು ಯಾರು ಆಗುತ್ತಾರೋ ಅವರ ಮೇಲೆ ಹೆಚ್ಚಿನ ಜವಾಬ್ದಾರಿಯನ್ನು ಹೊರಿಸಬೇಕಾದಂಥ ಕಾಲ ಇದು. ಇಷ್ಟೊಂದು ಜವಾಬ್ದಾರಿಯನ್ನು ಹೊತ್ತು ಎಲ್ಲಾ ಕಾನೂನುಗಳನ್ನೂ ಜಾರಿಗೆ ತಂದು ರೇಷ್ಮೆ ಬೆಲೆಯನ್ನು ಇಳಿಸಲಿಕ್ಕೆ ಮತ್ತು ರೇಷ್ಮೆ ಉತ್ಪತ್ತಿಯ ಪ್ರಮಾಣವನ್ನು ಹೆಚ್ಚಿಸಿ ರೇಷ್ಮೆಯನ್ನು ಉಪಯೋಗಿಸತಕ್ಕ ಪ್ರಜೆಗಳಿಗೂ ಸಹ ಸುಲಭದರದಲ್ಲಿ ರೇಷ್ಮೆವಸ್ತ್ರವನ್ನು ಒದಗಿಸುವುದಕ್ಕೆ ಅನುಕೂಲವಾಗದೆ ಇದ್ದರೆ ನಮ್ಮ ರೇಷ್ಮೆ ಕೈಗಾರಿಕೆ ಬಹಳವರ್ಷ ಇರುವುದಿಲ್ಲ. ಈಗಾಗಲೇ ಬಹಳ ಮಟ್ಟಿಗೆ ವಿವಿಧ ರೇಷ್ಮೆಗಳ ಪೈಪೋಟಿಯಿಂದ ಉತ್ತಮ ದರ್ಜೆಯ ಮತ್ತು ಸ್ವಾಭಾವಿಕವಾದ ರೇಷ್ಮೆಗೆ ಬೆಂಬಲ ಇಲ್ಲದೆ ಹೋಗಿದೆ. ಶ್ರೀಮಾನ್ ಮಲ್ಲಾರಾಧ್ಯರು ಈಗಾಗಲೇ ಹೇಳಿದರು, ಎಲ್ಲರಲ್ಲೂ ಸ್ಟಾಕು ಹೆಚ್ಚಾಗಿದೆ. ಸರ್ಕಾರದ ವೀವಿಂಗ್ ಫ್ಯಾಕ್ಟರಿ ಇಲ್ಲದೆ ಎಲ್ಲಾ ಕಡೆಯಲ್ಲೂ ಸಹ ಹೆಚ್ಚಿನ ಬೆಲೆಯನ್ನು ಕೊಟ್ಟು ಉಪಯೋಗಿಸತಕ್ಕ ಜನ ಉಪಯೋಗಿಸುವುದಕ್ಕೆ ಹಿಂಜರಿಯುತ್ತಿದ್ದಾರೆ. ನಮ್ಮಲ್ಲಿ ಈಗಾಗಲೇ ಬಹಳ ಮಟ್ಟಿಗೆ ಆರ್ಥಿಕ ಮುಗ್ಗಟ್ಟು ತಲೆದೋರಿದೆ. ಈ ಒಂದು ಸಂದರ್ಭದಲ್ಲಿ 100,250,300 ರೂಪಾಯಿಗಳನ್ನು ಸೀರೆಗೆ ಕೊಟ್ಟು ಉಡಲಿಕ್ಕೆ ಯಾರೂ ತಯಾರಾಗಿಲ್ಲ. ಒಂದು ವರ್ಷಕ್ಕೆ 25 ಸೀರೆ ಆದರೂ ಚಿಂತೆಯಿಲ್ಲ, ಹತ್ತು ಸೀರೆ ತೆಗೆದುಕೊಳ್ಳೋಣ ಇನ್ನೂ ಕಡಿಮೆ ಬೆಲೆಗೆ ಸಿಕ್ಕಿದ್ದನ್ನು ತೆಗೆದುಕೊಳ್ಳೋಣ ಎನ್ನುವುದು ಮನುಷ್ಯನ ಸ್ವಭಾವ. ಹೀಗಾಗಿ ದೇಶದಲ್ಲಿ ಹತ್ತು ಲಕ್ಷ ಜನಗಳಿಗೆ ಉಪಯೋಗ ಆಗತಕ್ಕ ಈ ಒಂದು ಕೈಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ಇಲ್ಲದೆ ಹಿಂದೆ ಸರಿಯಬೇಕಾಗಿದೆ. ಅನೇಕ ಕ್ಷೇತ್ರಗಳಲ್ಲಿ ಎಲ್ಲರೂ ಕಷ್ಟಕ್ಕೆ ಒಳಗಾಗಿ ಈ ಕೈಗಾರಿಕೆಯನ್ನು ಬಿಡತಕ್ಕ ಪ್ರಸಂಗ ಒದಗಿದೆ: ಅದಕ್ಕೆ ನಿದರ್ಶನ ಸರ್ಕಾರದ ಮೂರು ನಾಲ್ಕು ಫಿಲೇಚರುಗಳು ಮಾತ್ರ ಕೆಲಸಮಾಡುತ್ತಿವೆ. ಉಳಿದ ಫಿಲೇಚರುಗಳು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಅದಕ್ಕೆ ಕಾರಣ ಇಷ್ಟೆ. ಆ ಪ್ರದೇಶದಲ್ಲಿ ವರ್ಷದಲ್ಲಿ ಒಂದು ಅಥವಾ ಎರಡುಬಾರಿ ಸುಗ್ಗಿ ಆದರೆ ಆ ತಳಿ ಬಿತ್ತನೆ ಶಕ್ತಿಯುತವಾಗಿ ಮುಂದುವರಿದುಕೊಂಡು ಬರುವುದಕ್ಕೆ ಸಾಧ್ಯ ಇದೆ. ನಮ್ಮಲ್ಲಿರುವ ತಳಿ ಪ್ರತಿವರ್ಷ ಕ್ಷೀಣಿಸುತ್ತಾ ಬಂದಿದೆ. ನಾವು ಬೆಳೆಯತಕ್ಕ ಗೂಡಿನಲ್ಲಿ ಕೇವಲ 200 ಎಳೆ ಕೂಡ ಬರುವುದಿಲ್ಲ. ಕ್ಷೀಣಿಸಿ ಜೀರ್ಣಆಗಿರತಕ್ಕ ತಳಿಯಿಂದ ಉತ್ಪನ್ನ ಆಗತಕ್ಕ ಗೂಡಿನಲ್ಲಿ 200 ರಿಂದ ಪರಮಾವಧಿ ಎಂದರೆ 400 ಎಳೆ ಬರುವುದೇ ಉತ್ಕೃಷ್ಟವಾದ ಗೂಡು. ಜಪಾನಿನಲ್ಲಿ 1,000 ಎಳೆಗಳಷ್ಟು ಬರುವ ಗೂಡುಗಳನ್ನು ಬೆಳೆಯುತ್ತಾರೆ. ಪ್ರತಿಯೊಂದು ದೇಶದಲ್ಲಿಯೂ ಸಹ ನಾಲ್ಕು ಎಳೆಗಳ ಮುಖಾಂತರ ರೇಷ್ಮೆ ರೀಲ್ ಮಾಡುವ ವಿಧಾನವಿದೆ. ಜಪಾನ್ ದೇಶದಲ್ಲಿ ಆರು ಎಳೆಗಳನ್ನು ತೆಗೆಸಿ ಒಂದು ಚರಕದಿಂದ ಹೆಚ್ಚಿನ ರೇಷ್ಮೆಯನ್ನು ತಯಾರುಮಾಡುವುದಕ್ಕೆ ಸಾಧ್ಯವಾಗಿದೆ. ಅಲ್ಲಿಯ ವಿಧಾನದಿಂದ ಎರಡು ಮೂರು ಬೇಸಿನ್‌ಗಳನ್ನು ಒಬ್ಬರೇ ನೋಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲಿ ಪ್ರತಿಯೊಂದು ಬೇಸಿನ್‌ಗೂ ಒಬ್ಬೊಬ್ಬರು ಬೇಕು. ಇದಕ್ಕೆ ಲೇಬರ್ ಬಹಳ ಹೆಚ್ಚಿಗೆ ಖರ್ಚಾಗುತ್ತದೆ. ಜೇರೇಸ್ ಉತ್ಪತ್ತಿಮಾಡಲು ಸಾಧ್ಯವಾಗಿಲ್ಲ. ಜೇರೇಸನ್ನು ಟರ್ಕಿಯಿಂದ ತೆಗೆದುಕೊಂಡು ಬಂದು ಶಕ್ತಿಯುತವಾಗಿ ಮಾಡುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಟಿ. ಮರಿಯಪ್ಪ.—ಇಂಪ್ರೂವ್ಡ್ ಬೇಸಿನ್ ಮಾಡಿದ್ದೇವೆ. ಅದರ ಕ್ವಾಲಿಟಿ ಹೇಗಿದೆ ಹೇಳಿ.

ಶ್ರೀ ಜೆ. ವೆಂಕಟಪ್ಪ.—ಫಿಲೇಚರ್ ವಿಚಾರಕ್ಕೆ ಆ ಮೇಲೆ ಬರುತ್ತೇನೆ. ಜೇರೇಸನ್ನು ಬೆಳೆಸಬೇಕು. ಫಾರಿನ್‌ನಿಂದ ಬರತಕ್ಕ ಬಿಳೀ ಕೂದಲಿನ ತಳಿಯನ್ನು ಮೈಸೂರಿನ ತಳಿಯೊಡನೆ ಕ್ರಾಸ್‌ಬ್ರೀಡ್ ಮಾಡಿ ಹೆಚ್ಚಿನಗೂಡು ಒದಗಿಸಬೇಕಾಗಿದೆ. ಶಕ್ತಿಯುತವಾದ ಬಿಳೀಗೂಡಿನ ಜೇರೇಸನ್ನು ಉಪಯುಕ್ತವಾಗಿ ಇಟ್ಟುಕೊಳ್ಳಬೇಕಾದರೆ ಒಂದು ಕ್ರಮ ಅನುಸರಿಸಬೇಕು. ಎರಡು ಮೂರು ಬಾರಿ ಶಾಖ ಆಗತಕ್ಕ ಯೂನಿಟ್ ಮತ್ತು ಡೈವೋಲ್ಟೇಜನ್ನು ಮಲ್ಟಿವೋಲ್ಟೇಜ್ ಮಾಡುವುದರಿಂದ ಶಕ್ತಿ ಕುಂದುತ್ತದೆ. ಆದ್ದರಿಂದ ಹೆಚ್ಚಿನ ಕೋಲ್ಡ್ ಸ್ಟೋರೇಜ್ ನಮ್ಮಲ್ಲಿ ಆಗಬೇಕು. ಈಗ ಮಾಡರನ್ ಎಕ್ವಿಪ್‌ಮೆಂಟುಗಳನ್ನು ಹೆಚ್ಚು ಹೆಚ್ಚು ಉಪಯೋಗಿಸಿಕೊಂಡು ಆ ತಳಿಯನ್ನು ದೀರ್ಘಕಾಲ ಉಪಯುಕ್ತವಾಗುವಂತೆ ಇಟ್ಟುಕೊಳ್ಳುವುದಕ್ಕೆ ಎಲ್ಲಾ ಪ್ರಯತ್ನಗಳನ್ನೂ ಮಾಡಿದರೆ ಮಾತ್ರ ಸ್ವಲ್ಪಮಟ್ಟಿಗೆ ನಮಗೆ ಬರತಕ್ಕ ರೇಷ್ಮೆ ಪ್ರಮಾಣವನ್ನು ಹೆಚ್ಚುಮಾಡಿಕೊಳ್ಳಬಹುದು. ನಮ್ಮಲ್ಲಿ ಆಗಲೇ ಒಂದು ಪೌಂಡಿಗೆ 18-19 ರೂಪಾಯಿಗಳವರೆಗೆ ಬರುತ್ತದೆ. ಜೆ. ಟೈಪಿನಿಂದ ಬರತಕ್ಕ ಗೂಡಿನಿಂದ ಎಂಟು ಒಂಭತ್ತು ಒಂದು ಪೌಂಡಿಗೆ ಬರುತ್ತದೆ. 18 ಎಲ್ಲಿ? 19 ಎಲ್ಲಿ? ಉತ್ತಮ ಜಾತಿ ತಳಿಯನ್ನು ಅಭಿವೃದ್ಧಿಪಡಿಸಬೇಕೆಂದು ಹೋದವರ್ಷದಲ್ಲಿ ಹೇಳಿದೆ· ಎಲ್ಲಾ ರೈತರಿಗೂ ಈ ತಳಿಯನ್ನು ಹಂಚುವುದಕ್ಕೆ ಸಾಧ್ಯವಾಗಿಲ್ಲ. ಬಹಳ ಬೇಗ ಈಗಿನ ತಳಿಗೆ ಕಾಯಿಲೆ ಬರುತ್ತದೆ. ಮಳೆಗಾಲದಲ್ಲಿ ಅಲ್ಲಿನ ವಾತಾವರಣವನ್ನು ನೋಡಿದರೆ ಜೀವಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಬೆಳೆ ಕೆಡುತ್ತದೆ ಎಂಬ ಹೆದರಿಕೆ ಸರ್ಕಾರಕ್ಕೆ ಇತ್ತು. ಹೋದವರ್ಷದಿಂದ ಈಚೆಗೆ ಆ ಶಂಕೆ ದೂರವಾಗಿದೆ. ಹೋದವರ್ಷ ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ಅವುಗಳನ್ನು ಹಂಚಿ ಒಳ್ಳೆಯ ಗೂಡನ್ನು ತಯಾರುಮಾಡಿದ್ದಾರೆ. ಒಟ್ಟಿನಲ್ಲಿ ಸರ್ಕಾರೀ ಗೂಡನ್ನು ರಿಲೀಜ್ ಮಾಡಿದ್ದರಿಂದ ಮೊದಲು ಆರು ಪೌಂಡುಗಳಷ್ಟು ಬರುತ್ತಿದ್ದುದು ಈಗ ಎಂಟು ಒಂಭತ್ತು ಪೌಂಡು ಆವರೇಜ್ ಬರುತ್ತಿದೆ. ಇದನ್ನು ಉಳಿಸಿಕೊಂಡು ಬರುವುದಕ್ಕೆ ಸರ್ಕಾರದವರು ರೈತರಿಗೆ ಸೂಕ್ತಸಲಹೆ ಕೊಟ್ಟು ಎಲ್ಲಾ ಸೌಕರ್ಯಗಳನ್ನೂ ರೈತರಿಗೆ ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. 1947-48ರ ವರೆಗೂ ನಮ್ಮ ದೇಶದ ಎಲ್ಲಾ ಫ್ಯಾಕ್ಟರಿಗಳೂ ಸಹ ಬಹಳ ಉತ್ತಮ ಮಟ್ಟದಲ್ಲಿ, ಹೆಚ್ಚಿನ ಪ್ರೋತ್ಸಾಹದಿಂದ ಕೆಲಸಮಾಡುತ್ತಿದ್ದುವು. ಕಾರಣ ವಿಷ್ಟೆ. ಹಿಂದೆ ಜಪಾನ್ ಮತ್ತು ಚೈನಾದೇಶಗಳು ಅಮೇರಿಕಾ ಮತ್ತು ಇಂಗ್ಲೆಂಡ್ ದೇಶಗಳಿಗೆ ರೇಷ್ಮೆ ಒದಗಿಸುವ ರಾಜ್ಯಗಳು ಆಗಿದ್ದುವು. ಅವಕ್ಕೆ ಸರಿಯಾಗಿ ಈಗ ರಕ್ಷಣೆ ಒದಗಿಸದೆ ಇದ್ದುದರಿಂದ ಅಲ್ಲಿಂದ ಬರುವ ರೇಷ್ಮೆ ನಿಂತುಹೋಯಿತು. ಯುದ್ಧಕಾಲದಲ್ಲಿ ಹೆಚ್ಚಿನ ಕೊರತೆ ಬಂತು. ಆಗ ಭಾರತ ಸರ್ಕಾರದವರು ಮೈಸೂರಿನಲ್ಲಿದ್ದಂಥ ಈ ಇಲಾಖೆ ಮುಖಾಂತರ ಒಂದು ಒಪ್ಪಂದಕ್ಕೆ ಬಂದು ಎಲ್ಲಾ ಫ್ಯಾಕ್ಟರಿಯಲ್ಲೂ ತಯಾರಾಗತಕ್ಕ ಉತ್ತಮ ರೇಷ್ಮೆಯನ್ನು ಇಂಗ್ಲೆಂಡ್ ದೇಶಕ್ಕೆ ಸಪ್ಲೈಮಾಡಬೇಕೆಂದು ಅಗ್ರಿಮೆಂಟ್ ಮಾಡಿಕೊಂಡರು. ಅದರಿಂದಾಗಿ ರೇಷ್ಮೆ ಬೆಲೆ ಬಹಳ ಮಟ್ಟಿಗೆ ಏರುವ ಒಂದು ವಾತಾವರಣ ಜಾಸ್ತಿಯಾಯಿತು. ಅದನ್ನು ಒಂದು ಹಿಡಿತದಲ್ಲಿಟ್ಟುಕೊಳ್ಳದೇ ಹೋದರೆ ನಮ್ಮ ಅಗ್ರಿಮೆಂಟ್ ಫಲಪ್ರದ

(ಶ್ರೀ ಜೆ. ವೆಂಕಟಪ್ಪ)

ವಾಗಿ ಈಡೇರಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಒಂದು ಶಂಕೆ ಬಂದು ಈ ಕಂಟ್ರೋಲನ್ನು ಜಾರಿಗೆ ತರಲಾಯಿತು. ಆಗಿನ ಪರಿಸ್ಥಿತಿಯಲ್ಲಿ ರೈತನು $1\frac{1}{4}$ ರೂಪಾಯಿಗಳಿಂದ $1\frac{1}{2}$ ರೂಪಾಯಿಗಳವರೆಗೂ ಕೊಡಬೇಕೆಂದು ಇತ್ತು. ಚರಕಾ ರೇಷ್ಮೆಯನ್ನು 22-30 ರೂಪಾಯಿಗಳವರೆಗೂ ಖರೀದಿ ಮಾಡುತ್ತಿದ್ದರು. ಅದನ್ನು ಆಕ್ಷನ್ನಿನಲ್ಲಿಟ್ಟಾಗ 80 ರೂಪಾಯಿಗಳವರೆಗೆ ಹೋಗುತ್ತಿತ್ತು. ಅದರಿಂದ ಸ್ಮಗಲಿಂಗ್‌ಗೆ ಕಾರಣವಾಯಿತು. ನಿಮ್ಮ ಕಾನೂನು ಫಲಪ್ರದವಾಗಿ ಜಾರಿಗೆ ಬರಲು ಸಾಧ್ಯವಾಗಲಿಲ್ಲ. ಹೆಚ್ಚಿನ ಪ್ರೋತ್ಸಾಹ ಇವಕ್ಕೆ ದೊರಕಿದ್ದರೆ, ಅಂತಹ ಸಹಕಾರ ರೈತರಿಂದ ಸಿಕ್ಕುತ್ತಿತ್ತು. ಒಂದಕ್ಕೆ ಮೂರರಷ್ಟು ಜಾಸ್ತಿ ಬೆಲೆ ಇದ್ದರೆ ಎಲ್ಲಿ ಸಹಕಾರ ಬರುತ್ತದೆ ಆ ಕಾನೂನು ಜಾರಿಗೆ ಬರದೆ ಇರಲಿಕ್ಕೆ ಮತ್ತು ಮುರಿದು ಬೀಳಲಿಕ್ಕೆ ಇನ್ನು ಬೇರೆ ಕಾರಣ ಯಾವುದೂ ಇಲ್ಲ. ಇಲಾಖೆಯಲ್ಲಿರತಕ್ಕ ನ್ಯೂನತೆಗಳನ್ನು ಸರಿಪಡಿಸಬೇಕು. ಈ ಉದ್ಯಮವನ್ನು ಅರಿಯತಕ್ಕವರು ಈ ಇಲಾಖೆಯ ಮ್ಯಾನೇಜ್‌ಮೆಂಟ್ ಮಾಡಬೇಕು. ಇನ್ನು ಫಿಲೇಚರ್ಸ್ ಬಗ್ಗೆ ಈ ಇಲಾಖೆ 1947 ರವರೆಗೂ ಬಹಳ ಉತ್ಸಾಹದಿಂದ ಕೆಲಸಮಾಡಿದೆ. 1947ರಲ್ಲಿ ಒಂದು ಅಗ್ರಿಮೆಂಟ್ ಮಾಡಿದ ಬಲದಿಂದ, ಒಂದು ಬೆಲೆ, ಸೆಕ್ಯೂರಿಟಿ ಇತ್ತು. ಗೂಡನ್ನು ಸುಲಭ ಬೆಲೆಗೆ ಒದಗಿಸಿಕೊಡುವ ಕಾನೂನು ಇತ್ತು. ಇದರಿಂದ ಗೂಡನ್ನು ಕೊಟ್ಟಂಥ ರೈತರಿಗೂ ಮತ್ತು ರೇಷ್ಮೆ ತೆಗೆದುಕೊಳ್ಳುವ ವ್ಯಾಪಾರಗಾರರಿಗೂ ಮತ್ತು ಕಂಪೆನಿಗಳಿಗೂ ಲಾಭ ಬಹಳವಾಗಿ ದೊರೆಯುವುದರಿಂದ ಬಹಳ ಉತ್ಸಾಹ ರೀತಿಯಲ್ಲಿ ಫಿಲೇಚರ್ಸ್ ಕೆಲಸಮಾಡುತ್ತಿದ್ದುವು. 1947ರಲ್ಲಿ ಇದ್ದಕ್ಕಿದ್ದ ಹಾಗೆ ಯುದ್ಧನಿಂತಾಗ್ಗೆ ಭಾರತ ಸರ್ಕಾರದವರು ನಮಗೆ ರೇಷ್ಮೆ ಬೇಡ ಎಂದು ಅವರ ಅಗ್ರಿಮೆಂಟನ್ನು ಬ್ರೇಕ್‌ಮಾಡಿದಾಗ ಎಲ್ಲಾ ಲುಕ್ಸಾನಿಗೆ ಅವಕಾಶವಾಯಿತು. ರೇಷ್ಮೆ ಸ್ಟಾಕು ಅವರಲ್ಲಿ ಉಳಿದುಕೊಂಡು 57 ರೂಪಾಯಿಗಳು ಮಾರ್ಕೆಟ್ಟಿನಲ್ಲಿದ್ದುದು 27 ರೂಪಾಯಿಗಳಿಗೆ ಇಳಿಯಿತು. ಹಿಂದೆ ಪ್ರತಿಯೊಂದು ಫ್ಯಾಕ್ಟರಿಯೂ ಮೂರು ನಾಲ್ಕು ಲಕ್ಷ ರೂಪಾಯಿಗಳಷ್ಟು ಲಾಭ ಸಂಪಾದಿಸಿದ್ದುವು.

ಶ್ರೀ ಟಿ. ಮರಿಯಪ್ಪ.—ರಿಜರ್ವ್‌ಫಂಡ್ ಬಿಲ್ಡಪ್ ಮಾಡಿರಲಿಲ್ಲ.

ಶ್ರೀ ಜೆ. ವೆಂಕಟಪ್ಪ.—ಶಿಡ್ಲಘಟ್ಟದಲ್ಲಿ ಒಂದು ಫ್ಯಾಕ್ಟರಿ ಇತ್ತು. ಅದು ರಿಜರ್ವ್‌ಫಂಡ್ ಹಣವನ್ನು ಳಿಸಿಕೊಳ್ಳುವುದಕ್ಕೆ ಬೇಕಾದಷ್ಟು ಪ್ರಯತ್ನಮಾಡಿತ್ತು.

5-30 P.M.

ಆಗಿಲ್ಲ. It is a private factory. ಮೈಸೂರು ಮತ್ತು ಚನ್ನಪಟ್ಟಣ ಫಿಲೇಚರು, ಇವೆರಡನ್ನು ಬಿಟ್ಟರೆ, ಬಾಕಿಯಲ್ಲವೂ ಮುಚ್ಚಲ್ಪಟ್ಟವು ಆಗ ಮುಚ್ಚಿದ ಕಾರ್ಖಾನೆಗಳು, ಈಗ 10-11 ವರ್ಷಗಳಾಗಿದ್ದರೂ ಕೆಲಸ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಮಾರ್ಕೆಟ್ ಇಲ್ಲದೇನೆ, ಫ್ಲಕ್‌ಚುಯೇಷನ್ ಆಗಿ ಈ ಕೈಗಾರಿಕೆ ಹಿಂದುಳಿಯಬೇಕಾಗಿ ಬಂದಿತು. ಆ ಫ್ಲಕ್‌ಚುಯೇಷನ್ ಅಥವಾ ಏರು ಪೇರು ವ್ಯಾಪಾರ ಇಂದಿಗೂ ಸಹ ನಿಂತಿಲ್ಲ. ಜನವರಿ ತಿಂಗಳಿಂದ ಈಗ್ಗೆ ಪೌಂಡಿಗೆ ಐದು-ಆರು ರೂಪಾಯಿ ಜಾಸ್ತಿ ಇದೆ. ಹೀಗೆ ಆಗಿಂದಾಗ್ಗೆ ವರ್ಷದಲ್ಲಿ ಎರಡು ಮೂರುಬಾರಿ ರೇಷ್ಮೆ ಕೈಗಾರಿಕೆಗೆ ಬೆಲೆಗಳ ಏರುಪೇರಿನಿಂದ ಧಕ್ಕೆ ಬರುತ್ತಾ ಇದ್ದರೆ ಈ ಕೈಗಾರಿಕೆಯನ್ನು ಉಳಿಸಿಕೊಂಡು ಹೋಗುವುದಕ್ಕೆ ಪ್ರೈವೇಟ್ ಸೆಕ್ಟಾರಿಗಾಗಲಿ, ಪಬ್ಲಿಕ್ ಸೆಕ್ಟಾರಿಗಾಗಲಿ ಆಗುವುದಿಲ್ಲವೆಂದು ನಾನು ಹೇಳುತ್ತಿದ್ದೇನೆ. ಬೆಲೆಯ ಸ್ಟೆಬಿಲೈಸೇಶನ್ ಅತ್ಯವಶ್ಯಕ. ಐದು ಆರು ರೂಪಾಯಿ ಜಾಸ್ತಿ, 10-12 ರೂಪಾಯಿ ಕಡಿಮೆ, ವರ್ಷದ ಉದ್ದಕ್ಕೂ ಆಗುತ್ತಾ ಹೋದರೆ ಈ ಕೈಗಾರಿಕೆಯನ್ನು ಉಳಿಸಿಕೊಂಡು ಬರುವುದಕ್ಕೆ ಸಾಧ್ಯವೆ? ಸೀಡ್ ಕಂಟ್ರೋಲನ್ನು ತರುತ್ತಾ ಇದ್ದೀರಿ. ಇದನ್ನು ತಂದ ಮಾತ್ರಕ್ಕೇ ಧಾರಣೆ ಸೆಕ್ಯೂರಿಟಿ ಬರುವುದಿಲ್ಲ. ಈ ಏರುಪೇರಿನ ಅವಾಂತರದಿಂದ ಬಹಳಮಟ್ಟಿನ ಧಕ್ಕೆ ಈ ಕೈಗಾರಿಕೆಗೆ ಇದೆ. ಆದ್ದರಿಂದ ಸ್ಟೆಬಿಲೈಸೇಶನ್ ಆಫ್ ಪ್ರೈಸ್ ಇರಬೇಕಾದ್ದು ಅತ್ಯಾವಶ್ಯಕ. ಹೊರಗಡೆ ದೇಶಗಳಾದ ಜಪಾನ್ ಮತ್ತು ಚೈನ, ಈ ಕೈಗಾರಿಕೆಯಲ್ಲಿ ಬಹಳ ನುರಿತಿವೆ. ಅವುಗಳು ಮುಂದುವರಿಯುವ ದೃಷ್ಟಿಯಿಂದ 1888 ರಿಂದ ಈಚೆಗೆ, 1927ರ ವರೆಗೂ ಆರು ವಿಧದ ವ್ಯವಸಾಯದ ಅಂತರಗಳನ್ನು ಹಾಕಿಕೊಂಡಿವೆ. ಈ ದಿನ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಸಹ ರೇಷ್ಮೆ ಪೈಪೋಟಿಗೆ ನಿಂತು, ದೇಶದಲ್ಲಿ ಬೆಳೆದು ಉಪಯೋಗಿಸತಕ್ಕಂಥ ರೇಷ್ಮೆಯ ಬೆಲೆಯನ್ನು ಏರಿಸಿ, ಹೊರಗಡೆ ದೇಶಗಳಿಗೆ ಕಳುಹಿಸತಕ್ಕಂಥ ರೇಷ್ಮೆ ಬೆಲೆಯನ್ನು ಕಡಿಮೆಮಾಡಿ, ಈ ಕೈಗಾರಿಕೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಅದು ಒಂದು ಹಿಡಿತದಲ್ಲಿರುವುದರಿಂದ, ಆ ಕೈಗಾರಿಕೆಯಲ್ಲಿ ಮುಂದುವರಿಯುತ್ತಾ ಇದ್ದಾರೆ. ಈ ಕೈಗಾರಿಕೆಯನ್ನು ಹಾಗೆ ಒಂದು ಹಿಡಿತಕ್ಕೆ ಒಳಪಡಿಸಿ ನಡೆಸಿಕೊಂಡು ಬಂದರೆ ಮಾತ್ರ, ಸ್ವಲ್ಪ ಮಟ್ಟಿಗೆ ತಲೆ ಎತ್ತುವುದಕ್ಕೆ ಸಾಧ್ಯ. ನಮ್ಮ ದೇಶದಲ್ಲಿ 1950ಕ್ಕೆ ಹಿಂದೆ ಕಾಫಿ ಪ್ಲಾಂಟರುಗಳ ಗತಿ ಏನಾಗಿತ್ತೆಂಬುದನ್ನು ಕಂಡಿದ್ದೇವೆ. ಈಚೆಗೆ ಅವರೇ ಒಂದು ಕೋಡು ನಿರ್ಮಿಸಿಕೊಂಡು, ಸ್ಟೆಬಿಲೈಸೇಶನ್ ಮಾಡಿಕೊಂಡು, ಒಂದು ವ್ಯವಸ್ಥೆಯನ್ನು ಮಾಡಿಕೊಂಡು, ಆ ಕೈಗಾರಿಕೆಯನ್ನು ಒಂದು ಹಿಡಿತಕ್ಕೆ ಒಳಪಡಿಸಿರುವುದರಿಂದ, ಇವತ್ತಿನ ದಿವಸ ಅದು ಉಳಿದುಕೊಳ್ಳುವುದಕ್ಕೆ ಸಾಧ್ಯವಾಯಿತು. ಈ ರೀತಿಯ ವ್ಯವಸ್ಥೆ ಈ ಒಂದು ಕೈಗಾರಿಕೆಯಲ್ಲಿಯೂ ಬರಬೇಕು. ಹಾಗೆ ನಮ್ಮ ರೇಷ್ಮೆ ಕೈಗಾರಿಕೆ ಒಂದು ವ್ಯವಸ್ಥೆಗೆ ಒಳಪಪ್ಟ ಮೇಲೆ ವ್ಯವಸಾಯ, ಗ್ರೇನೇಜ್, ಫಿಲೇಚರ್ಸ್ ಮತ್ತು ವೀವಿಂಗ್ ಸೆಕ್ಟಾರುಗಳಲ್ಲಿ ಬರತಕ್ಕಂಥ ಹೆಚ್ಚು ಪ್ರಮಾಣದ ಲಾಭದಲ್ಲಿ ಶೇಕಡ $12\frac{1}{2}$ ಯಷ್ಟನ್ನಾದರೂ ರಿಸರ್ಚಿಗೆ ಒದಗಿಸಬೇಕು ಆಗ ರಿಸರ್ಚ್ ಭಾಗವನ್ನು ಬೆಳೆಸಲಿಕ್ಕೆ ಸಾಧ್ಯ. ಈ ವ್ಯವಸಾಯದಲ್ಲಿ ಪ್ರತಿಯೊಬ್ಬ ಕಾರ್ಖಾನೆಯವನೂ ಹೆಚ್ಚಿನ ಮಾಹಿತಿ ಪಡೆಯಬೇಕು, ಮತ್ತು ಈ ಹೆಚ್ಚಿನ ಶಿಕ್ಷಣವನ್ನು ಪಡೆಯುವುದಕ್ಕೆ ಒಂದು ಸೌಲಭ್ಯವನ್ನು ಒದಗಿಸಬೇಕು. ಆದಕ್ಕೋಸ್ಕರ 100ಕ್ಕೆ, $12\frac{1}{2}$ ಯಷ್ಟನ್ನು ಮೀಸಲಾಗಿಡಬೇಕು. ಇದೆಲ್ಲಾ ಸಾಧ್ಯವಾಗಬೇಕಾದರೆ, ಕೈಗಾರಿಕೆ ಒಂದು ಹಿಡಿತಕ್ಕೆ ಸಿಗಬೇಕು. ಆಗ ರಿಸರ್ಚ್ ಡೆವಲಪ್‌ಮಾಡಲಿಕ್ಕೆ ಸಾಧ್ಯ. ಇವತ್ತಿನ ದಿವಸ ವ್ಯವಸಾಯದಲ್ಲಿ ನಿರತರಾಗಿರತಕ್ಕಂಥ 100 ರೈತರಲ್ಲಿ, 80ರಷ್ಟು ಜನ ಅವಿದ್ಯಾವಂತರಾಗಿ, ಈ ಸಂಶೋಧನೆಯ ಪರಿಜ್ಞಾನವೇ ಇಲ್ಲ. ಈ ರಿಸರ್ಚ್ ಭಾಗವನ್ನು ಏರ್ಪಡಿಸಿದರೆ, ಅದರ ಜ್ಞಾನವನ್ನು ಪಡೆಯಲಿಕ್ಕೆ ಅವರಿಗೆ ಅವಕಾಶವಾಗುತ್ತದೆ. ಅಂಥ ಸೌಲಭ್ಯ

ಗಳನ್ನು ಉಪಯೋಗಿಸಿಕೊಂಡು ಅವರ ಹೆಚ್ಚಿನ ಬೆಳೆಯನ್ನು ಬೆಳೆಯಲಿಕ್ಕೆ ಸಾಧ್ಯವಾಗಿ, ಕೈಗಾರಿಕೆಯನ್ನು ಉಳಿಸುವುದಕ್ಕಾಗುತ್ತದೆ. ಈ ಸೌಲಭ್ಯಗಳಿಲ್ಲದೆ ಅನೇಕ ಪ್ರೈವೇಟ್ ಸೆಕ್ಟರಿನವರು, ಮುಂದುವರಿಯದೆ ಇರಬೇಕಾಗಿದೆ. ಅನೇಕರು ತಮ್ಮದೇ ಆದ ಒಂದು ಸ್ವಾಭಿಮಾನ ಅಡವ ಸ್ವಾರ್ಥತೆಯಿಂದಾಗಿ, ಈ ಕೈಗಾರಿಕೆಗೆ ಅಡ್ಡಿಯನ್ನು ತಂದೊಡ್ಡಬಹುದು, ಅದನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿಲ್ಲ. ಅವರ ಒಂದು ಮನ್ನಣೆಯನ್ನು ಪಡೆಯಬೇಕಾಗಿಲ್ಲ. ಕೈಗಾರಿಕೆಯ ಹಿತದೃಷ್ಟಿಯಿಂದ ಯಾವುದು ಒಳ್ಳೆಯದೋ, ಆ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹಿಂಜರಿಯಬಾರದು. ದೇಶ ಉದ್ಧಾರವಾಗಲಿ ಎಂಬ ಮನೋಭಾವ ನಮ್ಮಲ್ಲಿ ಬೆಳೆದು, ಈ ಕೈಗಾರಿಕೆಯನ್ನು ಒಂದು ಹಿಡಿತಕ್ಕೆ ತೆಗೆದುಕೊಂಡು, ಲಕ್ಷೋಪಲಕ್ಷ ಜನಗಳು ಸೋಮಾರಿಗಳಾಗಲು ಅವಕಾಶಕೊಡಕೂಡದು. ವ್ಯವಸಾಯಗಾರರಾಗಲಿ, ವ್ಯವಸಾಯದ ಉದ್ಯೋಗದಲ್ಲಿ ನಿರತರಾದವರಾಗಲೀ ವರ್ಷದಲ್ಲಿ ಉಳಿದ ಆರು ತಿಂಗಳ ಕಾಲವನ್ನು ಸೋಮಾರಿಗಳಾಗಿ ಕಳೆಯುವುದಕ್ಕೆ ಅವಕಾಶಕೊಡದೆ ಅವರಿಗೆ ಕೆಲಸವನ್ನು ಒದಗಿಸಬೇಕು. ಅದಕ್ಕಾಗಿ ಈ ಕಾಟೇಜ್ ಇಂಡಸ್ಟ್ರಿಗೆ ಪ್ರಾಮುಖ್ಯತೆ ಕೊಟ್ಟರೆ, ಇದನ್ನು ಹೆಚ್ಚಿನ ರೂಪದಲ್ಲಿ ಬೆಳೆಸಿಕೊಂಡು ಬರುವುದಕ್ಕೆ ಸಾಧ್ಯವಾಗುತ್ತದೆ. ಆಗ ಎಲ್ಲರೂ ತಮ್ಮ ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು, ಅವರವರ ಉತ್ಪತ್ತಿಯಲ್ಲಿ ಸರ್ಕಾರಕ್ಕೆ, ಇಲಾಖೆಗೆ ಇಷ್ಟು ಭಾಗವನ್ನು ಕೊಡುವುದಾದರೆ, ಅದರಿಂದ ಅವರಿಗೆ ಪ್ರತಿಫಲ ದೊರೆಯುತ್ತದೆ. ಒದಗಿಸತಕ್ಕಂಥ ಸೌಲಭ್ಯಗಳನ್ನು ಮತ್ತು ಸಮಾಚಾರಗಳನ್ನು ಅವರು ವ್ಯವಸಾಯದಲ್ಲಿ ಮತ್ತು ಕೈಗಾರಿಕೆಯಲ್ಲಿ ಅಳವಡಿಸಿಕೊಂಡು ಎಷ್ಟರಮಟ್ಟಿಗೆ ಅದನ್ನು ಅಭಿವೃದ್ಧಿಮಾಡಿಕೊಳ್ಳಬಹುದೆಂಬ ಒಂದು ಪರಿಜ್ಞಾನ ಅವರಲ್ಲಿ ಬರುವುದು. ಆಗ ಅವರಲ್ಲಿ ಒಂದು ಜವಾಬ್ದಾರಿ ಮೂಡುತ್ತದೆ. ಶೇಕಡ 12½ಯಷ್ಟರ ಉತ್ಪತ್ತಿಯನ್ನು ಅವರು ಇಲಾಖೆಗೆ ಕೊಡಲೇಬೇಕು ಎಂಬ ಒತ್ತಡವನ್ನು, ಕಡ್ಡಾಯವನ್ನು ನಾವು ತರಲೇಬೇಕೆಂದು ಈ ಸಂಧರ್ಭದಲ್ಲಿ ಸಲಹೆ ಮಾಡುತ್ತೇನೆ. ಈ ಫಿಲೇಚರ್ ಮ್ಯಾನೇಜ್‌ಮೆಂಟ್ ನಮ್ಮಲ್ಲಿ ಕೆಟ್ಟದ್ದರಿಂದ, ಫಿಲೇಚರ್ಸ್ ನಮ್ಮ ದೇಶದಲ್ಲಿ ಮೂಲೆಗೆ ಬೀಳಬೇಕಾದಂಥ ಪ್ರಸಂಗ ಬಂದಿತ್ತು. ಸರ್ಕಾರದ ಕಾರ್ಖಾನೆಗಳಲ್ಲಿ ನಷ್ಟವೇಕೆ ಆಗುತ್ತಿದೆಯೆಂದರೆ ಅಲ್ಲಿ ಅನುಭವಸ್ಥರಿಲ್ಲ. ಇಲಾಖೆಗೆ ಸೇರಿಕೊಂಡಿರುವವರಲ್ಲಿ, ಕಸಬಿನಲ್ಲಿ ನಿರತರಾಗಿದ್ದವರಿಲ್ಲ. ಇಲಾಖೆಯಲ್ಲಿರುವ 100 ಜನಗಳಲ್ಲಿ ಇಬ್ಬರು ಸಹ ಈ ಕಸಬಿನಲ್ಲಿ ನಿರತರಾಗಿದ್ದವರಿಲ್ಲ. ಹೊರಗಡೆಯಿಂದ ಕೆಲಸಕ್ಕಾಗಿ ಬಂದು ಸೇರಿಕೊಂಡವರು ಹೆಚ್ಚಾಗಿದ್ದಾರೆ. ಇವರಿಗೆ ಈ ಕೈಗಾರಿಕೆಯ ಮಾಹಿತಿ ಇಲ್ಲದೆ, ಇದನ್ನು ಉಳಿಸಿಕೊಂಡು ಬರಬೇಕೆಂಬ ಉತ್ಸಾಹವಿಲ್ಲದೆ, ಈ ಕೈಗಾರಿಕೆ ಅಸ್ತವ್ಯಸ್ತ ಆಗುವುದಕ್ಕೆ ಕಾರಣರಾಗಿದ್ದಾರೆ. ಇವರಿಗೆ ಈ ಕೈಗಾರಿಕೆಯ ಪರಿಶ್ರಮ ಇಲ್ಲ. ರೇಷ್ಮೆಗೂಡು ಎಂದರೇನು, ಇಳಿವರಿ ಎಂದರೇನು, ರೇಷ್ಮೆಯನ್ನು ಬಿಚ್ಚುವುದೆಂದರೇನು, ಮುಂತಾದುವುಗಳ ಪರಿಶ್ರಮ ಅವರಲ್ಲಿ ಇಲ್ಲದಿರುವುದರಿಂದ, ಪ್ರೈವೇಟ್ ಸೆಕ್ಟರುಗಳಲ್ಲಿ 14-15 ಇದ್ದರೆ, ಸರ್ಕಾರದ ಕಾರ್ಖಾನೆಗಳಲ್ಲಿ 18-19 ಇದೆ.

ಪ್ರೈವೇಟ್ ಸೆಕ್ಟರಿನವರೂ ಸ್ವಲ್ಪ ಉತ್ಸಾಹದಿಂದ ಈ ಕೆಲಸ ಮಾಡದೆ ಇದ್ದಿದ್ದರೆ, ಕೂಲಿಗಾರರನ್ನು ಉಬ್ಬಿಸಿ ಅವರಿಂದ ಹೆಚ್ಚಿನ ಕೆಲಸವನ್ನು ಪಡೆದುಕೊಳ್ಳದೆ ಇದ್ದಿದ್ದರೆ, ಅಥವಾ ಕೂಲಿಗಾರರಾಗಲೀ ಅಥವಾ ಮಾಲೀಕರುಗಳಾಗಲಿ ಸ್ವಲ್ಪ ಅಶ್ರದ್ಧೆ ತೋರಿಸಿದ್ದಿದ್ದೇ ಆಗಿದ್ದರೆ ಪ್ರೈವೇಟ್ ಸೆಕ್ಟರ್ ಕೂಡ ಉದ್ಯಮದಲ್ಲಿ ನಷ್ಟಹೊಂದತಕ್ಕಂಥ ಸಂದರ್ಭವೇ ಇತ್ತು. ಆದರೆ ನಮ್ಮ ಕಡೆ ಒಂದು ವಾಡಿಕೆಯಾಗಿ ''ಸ್ವಲ್ಪ ಎಡಗೈ ಆಡಿಸಿದರೆ ಈಲ್ಡ್ ಜಾಸ್ತಿ ಆದಂತೆಯೇ'' ಎಂದು ಹೇಳುತ್ತಾರೆ. ಏತಕ್ಕೆಂದರೆ ರೇಷ್ಮೆ ಗೂಡುಗಳಿಂದ ರೇಷ್ಮೆ ತೆಗೆಯುವಾಗ ಎಡಗೈ ಉಪಯೋಗಿಸುತ್ತಿರುವ ಕಡೆ ಆಗತಕ್ಕದ್ದೆಲ್ಲ ವೇಸ್ಟ್ ಶಿಲ್ಕ್, ಬಲಗೈ ಆಡತಕ್ಕ ಭಾಗದಲ್ಲೆಲ್ಲಾ ಆಗತಕ್ಕದ್ದು, ರೇಷ್ಮೆ ಎಳೆಗಳಾಗತಕ್ಕ ಕೆಲಸ. ಹೀಗೆ ಈ ಎಡಗೈ ಆಡಿಸತಕ್ಕ ಕೆಲಸದಲ್ಲಿ ಕೂಲಿಗಾರರೇನಾರೂ ಬೇಜಾರು ಪಟ್ಟುಕೊಂಡಲ್ಲಿ ಈ ಕೈಗಾರಿಕೆ ಒಂದೇ ತಿಂಗಳಿನಲ್ಲಿ ನಾಶವಾಗುವಂತೆ ಮಾಡಿಬಿಡುತ್ತಾರೆ. ಆದುದರಿಂದ ಕೂಲಿಗಾರರನ್ನೆಲ್ಲ ಒಳ್ಳೆ ಒಂದು ಗುಡ್ ಮೂಡಿನಲ್ಲಿಟ್ಟುಕೊಂಡಿರಬೇಕು; ಈ ಕೈಗಾರಿಕೆಯಲ್ಲಿ ತೊಡಗತಕ್ಕ ಜನರಿಗೆ ಈ ಬಾಬಿನಲ್ಲಿ ಒಳ್ಳೆ ಪರಿಶ್ರಮವಿರಬೇಕು; ಅವರಲ್ಲಿ ಒಳ್ಳೆ ದಕ್ಷತೆಯಿರಬೇಕು; ಈ ಬಾಬುಗಳ ಪೈಕಿ ಯಾವುದೊಂದು ಕುಂಟಿಸಿದರೂ ಈ ಕೈಗಾರಿಕೆಯನ್ನು ಮುಚ್ಚಲೇಬೇಕಾಗುತ್ತದೆ. ಇಲ್ಲಿಯವರೆಗೂ ಈ ಉದ್ಯಮದಲ್ಲಿ ಒಳ್ಳೆಯ ಅನುಕೂಲವಾಗಿ ಬರುತ್ತಿದ್ದಂಥ ರೇಷ್ಮೆಯಭಾಗ ಕಡಮೆಯಾಗುತ್ತಿದೆ, 16 ರೆಂಡಿಟ ಇದ್ದುದು ಈಗ 19ಕ್ಕೆ ಹೋಗಿದೆ. ಹೀಗೆ ಈ ಕೈಗಾರಿಕೆಯಲ್ಲಿ ಇನ್ನೂ ಕೆಲವು ಲೋಪದೋಷಗಳಿವೆ. ಈ ಕೈಗಾರಿಕೆ ಅಭಿವೃದ್ಧಿಹೊಂದಿ, ಲಾಭದಾಯಕವಾದ ರೀತಿಯಲ್ಲಿ ನಡೆಯಬೇಕಾಗಿದ್ದರೆ ಇದು ಅರಿತು ನುರಿತ ಹಾಗೂ ಈ ಉದ್ಯಮದಲ್ಲಿ ಚೆನ್ನಾಗಿ ಪರಿಶ್ರಮ ಪಡೆದಂಥಾ ಜನರಕೈಯಲ್ಲೇ ಇದ್ದಿರಬೇಕು. ಇದರ ಏಳಿಗೆ ವಿಚಾರದಲ್ಲಿ ಈ ಉದ್ಯಮದಲ್ಲಿ ಪರಿಶ್ರಮವಿರತಕ್ಕಂಥ ಎಲ್ಲ ಜನರ ಸಲಹೆಗಳನ್ನೂ ಪಡೆಯಬೇಕು; ಹೀಗಾದರೆ ಆಗ ಈ ಇಲಾಖೆ ಒಂದು ಉತ್ತಮ ರೀತಿಯಲ್ಲಿ ಕೆಲಸಮಾಡಲಿಕ್ಕೆ ಸಾಧ್ಯವಾಗುತ್ತದೆ. ಹೀಗೆ ಮಾಡದೆ ಇಲಾಖೆಯವರು ನಮ್ಮದೇ ಒಂದು ಬೇರೆಮಾರ್ಗವೆಂದು ಹೇಳುತ್ತ ಈ ಕೈಗಾರಿಕೆಯಲ್ಲಿ ನಿರತರಾಗಿರತಕ್ಕವರು ಅವರೇ ಒಂದು ಮಾರ್ಗದಲ್ಲಿ ಹೋಗುತ್ತಿರುವುದರಿಂದ ಇದರ ಬಗ್ಗೆ ಒಂದು ಅಸ್ತವ್ಯಸ್ತ ಆಗಿರುತ್ತದೆ. ಈ ದಿವಸ ಇಲಾಖೆಯವರು ಇಂಥ ಒಂದು ಅಸ್ತವ್ಯಸ್ತ ರೀತಿಯಲ್ಲಿ ಸಿಕ್ಕಿಬಿದ್ದು, ಒಬ್ಬರಿಗೊಬ್ಬರಿಗೆ ಒಂದು ಸರಿಯಾದ ಅಂಡರ್‌ಸ್ಟಾಂಡಿಂಗ್ ಇಲ್ಲದೆ, ಜೊತೆಗೆ ಇಲಾಖೆಗೆ ಮುಖ್ಯಾಧಿಕಾರಿಗಳಾಗಿ ಬರತಕ್ಕವರಲ್ಲಿ ದಕ್ಷತೆ ಕೂಡ ಇರದೆ ನಾನಾ ಲೋಪದೋಷಗಳಿಂದ ಈ ದಿವಸ ರೆಂಡಿಟ 19ಕ್ಕೆ ಏರಿದೆ. ಅಷ್ಟೇ ಅಲ್ಲ ರೇಷ್ಮೆಯನ್ನು ಖರ್ಚುಮಾಡತಕ್ಕ ವಿಚಾರದಲ್ಲಿ ಸರ್ಕಾರದವರು ನಾಲ್ಕುವರೆ ಐದು ರೂಪಾಯಿಗಳಂತೆ ನಿಗದಿಮಾಡಿದ್ದರೂ ಈಗ ಈ ಧಾರಣೆಯನ್ನು ಏಳು ರೂಪಾಯಿಗಳಿಗೆ ಏರಿಸಿದ್ದಾರೆ. ಈಗ ಮಾರಾಟಮಾಡತಕ್ಕ ಬೆಲೆ ಸಹ ಪೌಂಡ್ ಒಂದಕ್ಕೆ ಎರಡು ರೂಪಾಯಿಗಳು ಜಾಸ್ತಿ ಆಗಿದೆ. ಹೀಗೆ ಕಚ್ಚಾಮಾಲು ಐದು ರೂಪಾಯಿಗೆ ಮಾರಾಟವಾಗಬೇಕಾಗಿದ್ದುದು ಏಳು ರೂಪಾಯಿಗೆ ಏರಿರುವುದರಿಂದ, ಈ ವಸ್ತುವಿನಿಂದ ತಯಾರಾಗತಕ್ಕ ಇತರ ಪದಾರ್ಥಗಳ ಬೆಲೆಯೂ ಕೂಡ ವಿಪರೀತ ಹೆಚ್ಚಾಗಿ ಹೋಗಿದೆ. ಹೀಗೆಲ್ಲ ನಡೆಸುತ್ತಿದ್ದರೆ ಇನ್ನು ಯಾವ ಕಾರ್ಖಾನೆತಾನೆ ಹೇಗೆ ಉಳಿದೀತು? ಆದರೆ ಪ್ರೈವೇಟ್ ಸೆಕ್ಟರಿನಲ್ಲಿ ಸ್ವತಃ ಅನುಭವವಿರತಕ್ಕಂಥ

(ಶ್ರೀ ಜೆ. ವೆಂಕಟಪ್ಪ)

ಜನರೇ ಈ ಉದ್ಯಮದಲ್ಲಿ ತೊಡಗಿರುವುದರಿಂದ ಏನೋ ಅಷ್ಟಿಷ್ಟು ಲಾಭವನ್ನು ಅವರು ಕಾಣುತ್ತಿದ್ದಾರೆ. ಸರ್ಕಾರದವರ ಕಾರ್ಖಾನೆಗಳೆಲ್ಲ ಮೂಲೆಗೆ ಬಿದ್ದಿವೆ. ಆದುದರಿಂದ ಈ ಕೈಗಾರಿಕೆಯನ್ನು ಇದರಲ್ಲಿ ಉತ್ತಮ ಪರಿಶ್ರಮ ವಿರತಕ್ಕ ಜನರ ಆಡಳಿತಕ್ಕೊಳಪಡಿಸಬೇಕು. ಆಗಲೇ ಇದರಲ್ಲಿರತಕ್ಕ ನ್ಯೂನತೆಗಳು ಹೊರಬಿದ್ದು ಅವುಗಳ ನಿವಾರಣೆಗೆ ಪ್ರಯತ್ನ ಸಾಗುತ್ತಿದೆ. ಇದನ್ನು ಮತ್ತಷ್ಟು ಉತ್ತಮ ದರ್ಜೆಗೆ ತರಲು ಸಾಧ್ಯವಾಗುತ್ತದೆ. ಈ ವಿಚಾರಗಳನ್ನೆಲ್ಲಾ ಸ್ವಲ್ಪಮಟ್ಟಿಗೆ ಅರಿತಿದ್ದುದರಿಂದಲೇ ನಮ್ಮ ಮಾನ್ಯ ಮಿತ್ರರು ಈ ನಿರ್ಣಯವನ್ನು ಈ ದಿವಸ ಈ ಸಭೆಯ ಮುಂದೆ ತಂದಿರುತ್ತಾರೆ. ಆದುದರಿಂದ ಈ ದಿವಸ ಈ ಕೈಗಾರಿಕೆಯಲ್ಲಿ ಯಾರ್ಯಾರು ನಿರತರಾಗಿರತಕ್ಕ ಜನಗಳಿದ್ದಾರೋ ಅವರಿಗೂ ಮತ್ತು ಈ ಇಲಾಖೆಯವರಿಗೂ ಒಂದು ನೇರವಾದ ಸಂಪರ್ಕ ಉಂಟಾಗುವಂತೆ ಮಾಡಬೇಕಾದ್ದು, ಈ ಕೈಗಾರಿಕೆಯ ಅಭಿವೃದ್ಧಿಯ ದೃಷ್ಟಿಯಿಂದ ಸರ್ಕಾರದವರ ಮುಖ್ಯ ಕರ್ತವ್ಯ. ಹೀಗೆ ಒಂದು ಹೊಂದಾವಣಿಯಾದರೆ ಈ ಕೈಗಾರಿಕೆಯಲ್ಲೊಂದು ಪ್ರತಿಫಲವನ್ನು ನಾವು ಕಾಣಬಹುದು; ಇದನ್ನು ಒಂದು ಉತ್ತಮ ಮಟ್ಟಕ್ಕೆ ತರಬಹುದು; ಇದರಲ್ಲಿ ಅಡಗಿರತಕ್ಕ ನ್ಯೂನತೆಗಳನ್ನು ಕಂಡುಹಿಡಿಯಬಹುದು ಈ ಇಲಾಖೆಗೆ ಹೆಚ್ಚು ದಕ್ಷತೆ ಇರತಕ್ಕ ಅಧಿಕಾರಿಗಳನ್ನು ಹಾಕಿದರೆ ಕೆಲಸವೂ ಚೆನ್ನಾಗಿ ನಡೆಯುತ್ತದೆ ಇದನ್ನು ಪರಿವರ್ತನೆ ಮಾಡುವುದಕ್ಕೂ ಕೂಡ ಸಾಧ್ಯವಾಗುತ್ತದೆ. ಮಾರ್ಪಾಡುಗಳನ್ನೂ ಕೂಡ ಮಾಡಬಹುದು. ಆದರೆ ಈ ದಿವಸ ಈ ಇಲಾಖೆಯ ಆಡಳಿತದಲ್ಲಿ ಅನೇಕ ಲೋಪ ದೋಷಗಳಿವೆ. 1957 ರಲ್ಲಿ ಕೈಗಾರಿಕೆಯಲ್ಲಿ ಹೆಚ್ಚಿನ ಶಿಕ್ಷಣವನ್ನು ಪಡೆದುಕೊಂಡು ಬರಲು ನಮ್ಮ ಮೈಸೂರು ಸರ್ಕಾರ ಒಬ್ಬ ಅಧಿಕಾರಿಗಳನ್ನು ಹೊರದೇಶಕ್ಕೆ ಕಳುಹಿಸಿದ್ದರು. ಆದರೆ ಹಾಗೆ ಹೊರಗಿನ ದೇಶಕ್ಕೆ ವ್ಯಾಸಂಗ ಮಾಡಲು ಹೋಗಿದ್ದವರು ಅವರ ಶಿಕ್ಷಣವನ್ನು ಪಡೆದನಂತರ ಮೂರು ಆರು ತಿಂಗಳು ಇದೇ ಉದ್ಯಮದ ಮತ್ತೇನೋ ಒಂದು ಹೆಚ್ಚಿನ ಪರಿಶ್ರಮಪಡೆದುಕೊಂಡು ಬರಲು ನಮ್ಮ ಸರ್ಕಾರ ಅನುಮತಿ ನೀಡಬೇಕೆಂಬುದು ಅವರೊಂದು ವಿಜ್ಞಾಪನೆ ಮಾಡಿಕೊಂಡಿದ್ದರಂತೆ. ಅದರ ಬಗ್ಗೆ ಸರ್ಕಾರ ತಮ್ಮ ಒಪ್ಪಿಗೆಯನ್ನು ಕಳುಹಿಸಿದರು. ಆದರೆ ನಮ್ಮ ಸರ್ಕಾರದವರು ಕಳುಹಿಸಿದ ಆ ಆಜ್ಞೆ ಅವರಿಗೆ ತಲುಪುವುದರೊಳಗಾಗಿ ಅವರು ಅಲ್ಲಿಂದ ನಮ್ಮ ದೇಶಕ್ಕೆ ವಾಪಸ್ಸು ಪ್ರಯಾಣ ಬೆಳಸಿದ್ದರಂತೆ. ಇಲಾಖೆಯಲ್ಲಿರತಕ್ಕ ಯಾರೋ ಒಬ್ಬ ವ್ಯಕ್ತಿ ಇವರು ಅಂಥ ಒಂದು ಹೆಚ್ಚಿನ ಶಿಕ್ಷಣವನ್ನು ಪಡೆದುಕೊಂಡು ಬಂದರೆ ಅದರಿಂದ ಅವರ ಸ್ಥಾನಮಾನಗಳಿಗೂ, ಅವರ ಗೌರವಕ್ಕೂ ಎಲ್ಲಿ ಒಂದು ಚ್ಯುತಿ ಬರುತ್ತೋ ಎಂಬ ಅಸೂಯೆಯಿಂದ ಆ ಆಜ್ಞೆ ಅವರಿಗೆ ಸಕಾಲಕ್ಕೆ ಮುಟ್ಟದ ರೀತಿಯಲ್ಲಿ ಏನೋ ಅಡಚಣೆಮಾಡಿದರೆಂದು ತಿಳಿದು ಬಂದಿತು. ಹೀಗೆ ಇಲಾಖಾ ಅಧಿಕಾರಿಗಳಲ್ಲೇ ಒಂದೊಂದು ರೀತಿಯ ಅಸೂಯೆ ಇರುವಾಗ ಅವರಿಗೆ ಈ ಕೈಗಾರಿಕೆಯ ಮೇಲೆ ಇನ್ನೆಷ್ಟರಮಟ್ಟಿಗೆ ಅಭಿಮಾನವಿದ್ದೀತು? ಆದರೆ ಇದರಲ್ಲಿ ಸರ್ಕಾರದವರ ತಪ್ಪೇನೂ ಇಲ್ಲ. ಅಧಿಕಾರಿಗಳು ಆರೀತಿ ಮಾಡಿದ್ದು ತಪ್ಪು. ಹೀಗೆ ಅಧಿಕಾರಿ ಅಧಿಕಾರಿಗಳಲ್ಲೇ ಇರತಕ್ಕ ಅಸೂಯೆಯಿಂದ ನಮ್ಮ ಅಧಿಕಾರಿಗಳಿಗೆ ಈ ಬಾಬಿನಲ್ಲಿ ಹೆಚ್ಚು ಪರಿಶ್ರಮ ಪಡೆಯಲು ಅವಕಾಶವಾಗಿಲ್ಲ. ಇಲಾಖಾ ಅಧಿಕಾರಿಗಳಲ್ಲಿ ಇಂಥ ಒಂದು ಮನೋಭಾವ ಬೆಳೆಯುತ್ತಾ ಬಂದಿರುವುದರಿಂದ ಈ ಕೈಗಾರಿಕೆಯನ್ನು ಒಂದು ಬೋರ್ಡಿನ ಮ್ಯಾನೇಜ್‌ಮೆಂಟಿಗೆ ಒಳಪಡಿಸುವುದು ಉತ್ತಮವಾದುದೆಂಬುದಾಗಿ ಹೇಳುತ್ತೇನೆ. ಆದುದರಿಂದ ಈ ಬೋರ್ಡನ್ನು ರಚಿಸಲು ಯಾರ್ಯಾರು ಸೇರಬೇಕೆಂದರೆ ಈ ಕೈಗಾರಿಕೆಯಲ್ಲಿ ನಿರತರಾಗಿರತಕ್ಕ ಜನರೂ ಮತ್ತು ಈ ವ್ಯವಸಾಯದಲ್ಲಿ ನಿರತರಾಗಿರತಕ್ಕ ಜನರೂ ಸೇರಬೇಕು. ಈ ವ್ಯವಸಾಯದಲ್ಲಿ ತೊಡಗಿರತಕ್ಕ ಜನರು ಮೂರು ಕಡೆ ಇದರ ಪ್ರಯೋಗ ನಡೆಸುತ್ತಿದಾರೆ. ಒಂದು ಕೋಲಾರ ಡಿವಿಜನ್, ಎರಡನೇಯದು ಮೈಸೂರು ಜಿಲ್ಲೆಯಲ್ಲಿರತಕ್ಕ ಚಾಮರಾಜನಗರ ಡಿವಿಜನ್ ಮತ್ತು ಚನ್ನಪಟ್ಟಣ ಡಿವಿಜನ್. ಈ ಮೂರು ಡಿವಿಜನ್‌ಗಳಲ್ಲಿ ಈ ವ್ಯವಸಾಯದಲ್ಲಿ ನಿರತರಾಗಿರತಕ್ಕ ಜನರೂ ಮತ್ತು ಈ ಕೈಗಾರಿಕೆಯಲ್ಲಿ ಹೆಚ್ಚಿನ ಪರಿಶ್ರಮ ಹೊಂದಿರತಕ್ಕ ಜನರೂ ಮತ್ತು ಈ ಉದ್ಯಮದಲ್ಲೂ ಮತ್ತು ಇದರ ಕಸುಬಿನಲ್ಲೂ ಹೆಚ್ಚಿನ ಪರಿಶ್ರಮ ಪಡೆದುಕೊಂಡಿರತಕ್ಕ ಜನರೂ, ಇಷ್ಟು ಮಂದಿ ಖಾಸಗೀ ಜನಗಳೂ ಮತ್ತು ಸರ್ಕಾರದವರ ಪರವಾಗಿ ಹೆಚ್ಚಿನ ಶ್ರದ್ಧೆಯಿಂದ ಕೆಲಸ ನಡೆಸತಕಂಥ ಒಬ್ಬ ಉನ್ನತ ಅಧಿಕಾರಿಗಳೂ ಆ ಬೋರ್ಡಿನಲ್ಲಿರುವಂತೆ ನೇಮಕಮಾಡಬೇಕು. ಈಗ ಈ ಕೈಗಾರಿಕೆಯಲ್ಲಿ ಆಗುತ್ತಿರುವ ನಷ್ಟವನ್ನು ತಡೆಗಟ್ಟಬೇಕಾಗಿದ್ದರೆ, ಇದರೊಂದಿಗೆ ಪರದೇಶಿ ರೇಷ್ಮೆಯ ಪ್ರೈಪೋಟಿಯನ್ನು ನಿಲ್ಲಿಸಬೇಕಾಗಿದ್ದರೆ ಇಂಥ ಒಂದು ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಇರಬೇಕಾದ್ದು ಅಗತ್ಯ ಮತ್ತು ಆವಶ್ಯಕ. ಇದು ಆದರೇನೇ ಆಗ ನಾವೇನಾದರೂ ಈ ಉದ್ಯಮದಲ್ಲಿ ಒಂದು ಹೆಜ್ಜೆ ಮುಂದೆಹೋಗಲು ಅವಕಾಶವಾಗುತ್ತದೆ. ಇನ್ನು ಸ್ಪನ್ ಸಿಲ್ಕ್ ಫ್ಯಾಕ್ಟರಿಗಳ ವಿಚಾರವನ್ನಾಗಲೇ ಶ್ರೀ ಮಲ್ಲಾರಾಧ್ಯರವರು ವಿಶದವಾಗಿ ಹೇಳಿದ್ದಾರೆ. ಹಿಂದೆ ಈ ಕೈಗಾರಿಕೆ ಇಡೀ ಏಷ್ಯಾ ಖಂಡಕ್ಕೇ ಒಂದು ದೊಡ್ಡ ಅಸೆಟ್ ಆಗಿ ಮೂವತ್ತು ಲಕ್ಷದವರೆಗೂ ವ್ಯವಹಾರ ನಡೆಯುತ್ತಿದ್ದಂಥದ್ದು ಹೋಗಿಬಿಟ್ಟು ಈ ದಿವಸ ಈ ಉದ್ಯಮ ಏಳು ಲಕ್ಷ ರೂಪಾಯಿಗಳ ನಷ್ಟಕ್ಕೆ ಗುರಿಯಾಗಿ ಮೈಸೂರು ಬ್ಯಾಂಕಿಗೂ ಮತ್ತು ಸರ್ಕಾರಕ್ಕೂ ಸಾಲಕ್ಕೆ ಕೈಚಾಚತಕ್ಕಂಥ ಪರಿಸ್ಥಿತಿಗೆ ಬಂದು ನಿಂತಿದೆ. ಉದ್ಯಮವು ಇಂಥ ಒಂದು ಪರಿಸ್ಥಿತಿಗೆ ಇಳಿಯಲು ಕಾರಣವಾದರೂ ಇಷ್ಟೆ:

ಸುವ್ಯವಸ್ಥಿತವಾದ ರೀತಿಯಲ್ಲಿ ಆ ಕೈಗಾರಿಕೆ ನಡೆಯಲಿಲ್ಲ. ಒಂದು ಪೌಂಡಿಗೆ ಹತ್ತು ಆಣೆಯಿಂದ ಒಂದೂಕಾಲು ರೂಪಾಯಿವರೆಗೆ ಸಿಲ್ಕ್ ವೇಸ್ಟನ್ನು ಸ್ಪನ್‌ಸಿಲ್ಕ್ ಫ್ಯಾಕ್ಟರಿ ಕೊಂಡುಕೊಂಡಿದೆ. ಕೇವಲ ಕೆಲವು ಸಂದರ್ಭಗಳಲ್ಲಿ, ಎರಡು ಮೂರು ವರ್ಷಗಳಿಗೆ ಒಂದು ಬಾರಿಮಾತ್ರ ರೂ. 1-10-0 ಯಿಂದ ರೂ. 1-12-0 ಯಂತೆ ಅಧಿಕ ಬೆಲೆಯನ್ನು ಕೊಟ್ಟಿರುತ್ತಾರೆ. ಹೊರದೇಶಗಳಲ್ಲಿರತಕ್ಕ ಕೂಲಿಗಾರರ ಮಟ್ಟಕ್ಕೂ, ಅವರಿಗೆ ಕೊಡತಕ್ಕ ಸಂಭಾವನೆಗೂ, ನಮ್ಮ ದೇಶದಲ್ಲಿರುವ ಕೂಲಿಗಾರರ ಮಟ್ಟ ಮತ್ತು ಅವರಿಗೆ ಕೊಡತಕ್ಕ ಸಂಭಾವನೆಗೂ ಬಹಳ ಅಂತರವಿದೆ. ನಮ್ಮಲ್ಲಿ ಸುಲಭ ಬೆಲೆಗೆ ಕಚ್ಚಾವಸ್ತುವನ್ನು ಕೊಂಡು, ಸುಲಭ ದರದಲ್ಲಿ ಕೆಲಸವನ್ನು ಮಾಡಲು ಜನರು ಒದಗಿದ್ದರೂ ಸಹ ನಷ್ಟವಾಗುವುದಕ್ಕೆ ಕಾರಣವೇನೆಂದರೆ, ಆ ಕಾರ್ಖಾನೆಯ ಮ್ಯಾನೇಜ್‌ಮೆಂಟಿನಲ್ಲಿರತಕ್ಕ ನ್ಯೂನತೆಗಳು. ಹೊರ ದೇಶದವರು ಮೂರು ರೂಪಾಯಿ ಕೊಟ್ಟು ನಮ್ಮಿಂದ ಒಂದು ಪೌಂಡ್ ಕಂಟ್ರಿ ಸಿಲ್ಕ್ ವೇಸ್ಟನ್ನು ಪಡೆದಿದ್ದಾರೆ. ಐದು ರೂಪಾಯಿನಿಂದ ಏಳು ರೂಪಾಯಿಗಳವರೆಗೂ ಕೊಟ್ಟು ಫಿಲೇಚರ್

ಸಿಲ್ಕ್‌ವೇಸ್ಟನ್ನು ಹೊರ ದೇಶದವರು ಖರೀದಿ ಮಾಡಿದ್ದಾರೆ. ನಾವಾದರೂ ಕೊಟ್ಟಿರುವುದು ಹತ್ತು ಆಣೆಯಿಂದ ಒಂದು ರೂಪಾಯಿವರೆಗೆ ಕಂಟ್ರಿವೇಸ್ಟಿಗೆ ಮತ್ತು ಎರಡೂವರೆಯಿಂದ ಮೂರು ರೂಪಾಯಿವರೆಗೆ ಫಿಲೇಚರ್‌ಗೆ. ಕಚ್ಚಾ ಪದಾರ್ಥದ ಬೆಲೆಯಲ್ಲಿ ಇಷ್ಟೊಂದು ಅಂತರ ವಿದ್ದರೂ ಸಹ, ಏತಕ್ಕೆ ನಷ್ಟವಾಯಿತು? ಅಲ್ಲಿ ಯಾರನ್ನು ನೀವು ನಂಬಿ.........

ಶ್ರೀ ಟಿ. ಮರಿಯಪ್ಪ.—ಸ್ಪರ್ಸಿಲ್ಕ್ ಫ್ಯಾಕ್ಟರಿ ಕಾರ್ಪೊರೇಷನ್ ಆಗಿತ್ತು. Corporate body, ಜಾಯಿಂಟ್ ಸ್ಟಾಕ್ ಕಂಪೆನಿ ಆಗಿತ್ತು.

ಶ್ರೀ ಜೆ. ವೆಂಕಟಪ್ಪ.—ಕಾರ್ಪೊರೇಟ್ ಬಾಡಿ ಆಗಿದ್ದರೂ ಸಹ ಸರ್ಕಾರದ ಕೈವಾಡ ಅದರಲ್ಲಿ ಬಹುಮಟ್ಟಿಗೆ ಇತ್ತು, ಸರ್ಕಾರದ ಅಧಿಕಾರಿಗಳು ಅದರ ಮ್ಯಾನೇಜ್‌ಮೆಂಟನ್ನು ನಡೆಸುತ್ತಿದ್ದರು.

ಶ್ರೀ ಟಿ. ಮರಿಯಪ್ಪ.—ಈಗಲೂ ಸರ್ಕಾರದ ಸಂಬಂಧವಿರಬೇಕೆಂದು ಶ್ರೀ ಮಲ್ಲಾರಾಧ್ಯರವರು ಹೇಳುತ್ತಾರೆ.

ಶ್ರೀ ಜೆ. ವೆಂಕಟಪ್ಪ.—ಆಡಳಿತಾಧಿಕಾರ ಅಥವಾ ಹಿಡಿತ ಯಾವುದೂ ಇದರಲ್ಲಿರಲಿಲ್ಲ. ಯಾರನ್ನು ನಂಬಿ ಮ್ಯಾನೇಜಿಂಗ್ ಏಜೆಂಟ್ ಎಂದು ನೇಮಿಸಿದ್ದಿರೋ, ಹಣಗಾರರು ಎನ್ನುವ ಮನೋಭಾವನೆಯಿಂದ ಇಟ್ಟುಕೊಂಡಿರೋ, ಅವರೇ ನಿಮ್ಮ ಕೈಗಾರಿಕೆಯನ್ನು ಮುಚ್ಚಲಿಕ್ಕೆ ಕಾರಣರಾಗಿದ್ದಾರೆ. ಈ ವಿಚಾರ ಸರ್ಕಾರಕ್ಕೂ ಗೊತ್ತಿಲ್ಲ; ಸರ್ಕಾರದ ಅಧಿಕಾರಿಗಳಿಗೂ ಗೊತ್ತಿಲ್ಲ. ನಡೆದಿರುವ ವಿದ್ಯಮಾನವನ್ನು ನಾನು ಹೇಳುತ್ತೇನೆ. ಅವರ ಅಣ್ಣತಮ್ಮಂದಿರು ಅಥವಾ ಅವರ ಪೈಕಿ ಷೇರುದಾರರು ನಾಲ್ಕಾರು ಜನರ ಹೆಸರಿನಲ್ಲಿ ಈ ವ್ಯಾಪಾರವೆಲ್ಲ ನಡೆಯುತ್ತಿದೆ. ಕಾರ್ಖಾನೆಯಿಂದ ಖರ್ಚುಹಾಕತಕ್ಕದ್ದು ಒಂದು ಪೌಂಡಿನ ಬೆಲೆ 22-23 ರೂಪಾಯಿ. ಅಂತಿಮವಾಗಿ ಅವರ ಕೈಬಿಟ್ಟು ಬೇರೆಯವರಿಗೆ ಹೋಗುವುದು 32-33 ರೂಪಾಯಿಗಳ ಬೆಲೆಗೆ. ಇತ್ತಕಡೆ ಇನ್‌ಕಂಟ್ಯಾಕ್ಸ್ ತಪ್ಪಿಸಿಕೊಳ್ಳುವುದಕ್ಕೆ ಮತ್ತು ಸರ್ಕಾರದಿಂದ ಹಾಕತಕ್ಕ ಹೆಚ್ಚಿನ ತೆರಿಗೆಯನ್ನು ತಪ್ಪಿಸಿಕೊಳ್ಳುವುದಕ್ಕೆ ನಾಲ್ಕು ಜನರನ್ನು ಸೇರಿಸಿಕೊಂಡಿದ್ದಾರೆ. ಹೀರಾಲಾಲ್ ಭಿಕಾಬಾಯಿ ನಿಮ್ಮ ಮ್ಯಾನೇಜಿಂಗ್ ಏಜೆಂಟ್ ಆದರೂ, ಅವರ ಸಂಬಂಧೀಕರ ಹೆಸರಿನಲ್ಲಿ ಕಾರ್ಖಾನೆಯಿಂದ 22-23 ರೂಪಾಯಿಗಳ ದರದಲ್ಲಿ ಪದಾರ್ಥಗಳು ಹೋದರೂ, ಆತನ ಕೈ ಬಿಡುವ ಹೊತ್ತಿಗೆ ಒಂದೆರಡು ರೂಪಾಯಿ ಮಾರ್ಜಿನ್, ಬೇರೆಯವರ ಕೈಗೆ ಹೋಗಿ ಅವರ ಕೈಯಿಂದ ಮತ್ತೊಬ್ಬರ ಕೈಗೆ ಹೋಗುವಾಗ್ಗೆ ಎರಡು ಮೂರು ರೂಪಾಯಿ ಹೆಚ್ಚಾಗಿ, ಬಳಕೆಗಾರರಿಗೆ ಸೇರುವವೇಳೆಗೆ 32-33 ರೂಪಾಯಿ ಆಗುತ್ತದೆ. ಈ ರೀತಿ ಹತ್ತು ರೂಪಾಯಿ ದರದಲ್ಲಿ ವ್ಯತ್ಯಾಸವಾದುದರಿಂದ ಈ ಕಾರ್ಖಾನೆಯನ್ನು ಮುಚ್ಚಬೇಕಾಯಿತು. ಮಾರತಕ್ಕ ಬೆಲೆ 32 ರೂಪಾಯಿ ಇರುವಾಗ 22 ರೂಪಾಯಿನಂತೆ ಖರ್ಚು ಹಾಕಿ ಉಳಿದ ಹತ್ತು ರೂಪಾಯಿಗಳು ದುರುಪಯೋಗವಾಗಿ, ನಿಮ್ಮ ಕೈಗಾರಿಕೆ ಮುಚ್ಚಿತು. ಅದರಲ್ಲಿ ಸುಮಾರು ನಾಲ್ಕೈದು ಲಕ್ಷ ರೂಪಾಯಿನಷ್ಟು ಷೇರು ಹಣವನ್ನು ಒದಗಿಸಿರುವ ಆ ಭಾಗದ ವ್ಯವಸಾಯಗಾರರು ಮತ್ತು ಈ ಕೈಗಾರಿಕೆಯಲ್ಲಿ ನಿರತರಾಗಿರತಕ್ಕ ಆಸಕ್ತಿ ಇರುವವರಿಗೆ ಉಪಯುಕ್ತವಾದ ಮತ್ತು ಲಾಭದಾಯಕವಾದ ಕಾರ್ಖಾನೆಯು ಇವೊತ್ತಿನ ದಿವಸ ಮುಚ್ಚಲಿಕ್ಕೆ ಕಾರಣವಾಯಿತು; ಲಿಕ್ವಿಡೇಷನ್ನಿಗೆ ಹೋಗಿ ಹೈಕೋರ್ಟಿನಲ್ಲಿ ನಡೆಯುವುದಕ್ಕೆ ಕಾರಣವಾಯಿತು.

ಚೇರ್‌ಮನ್ ಅವರು.—ಅದರೊಳಗೆ ಚುನಾಯಿತರಾದ ಮೆಂಬರುಗಳಿರಲಿಲ್ಲವೇ ?

ಶ್ರೀ ಜೆ. ವೆಂಕಟಪ್ಪ.—ಇರಲಿಲ್ಲ. ಹೀಗೆ ಆ ಕೈಗಾರಿಕೆ ನಮ್ಮ ಇಡೀ ಏಷ್ಯ ದೇಶಕ್ಕೆ ಒಂದೇ ಒಂದು ಕೈಗಾರಿಕೆ ಆದರೂ ಸಹ ಕಣ್ಣು ಮುಚ್ಚಬೇಕಾದ ಪರಿಸ್ಥಿತಿ ಒದಗಿತು.

ಹೊರ ದೇಶಕ್ಕೆ ನಮ್ಮಿಂದ ಹೋಗತಕ್ಕ ಸಿಲ್ಕ್ ವೇಸ್ಟ್ ಬಗ್ಗೆ ನಮ್ಮ ಸ್ನೇಹಿತರೂ ಮತ್ತು ಮಂತ್ರಿಗಳೂ ಹೇಳಿದರು. ಅವರ ಅಭಿಪ್ರಾಯ ನನ್ನ ಅಭಿಪ್ರಾಯಕ್ಕಿಂತ ಸ್ವಲ್ಪಮಟ್ಟಿಗೆ ಬದಲಾವಣೆಯಾಗಿದೆ. 1948ಕ್ಕೆ ಮೊದಲು ಹೆಚ್ಚಿನ ಪ್ರಮಾಣದಲ್ಲಿ ನಮ್ಮ ಸಿಲ್ಕ್ ವೇಸ್ಟ್ ಹೊರ ದೇಶಗಳಿಗೆ ಹೋಗುತ್ತಿತ್ತು. ಜಪಾನ್ ಮತ್ತು ಚೈನಾ ದೇಶಗಳ ಸಿಲ್ಕ್ ವೇಸ್ಟನ್ನು ಇಂಗ್ಲೆಂಡ್ ದೇಶದವರು ತರಿಸುತ್ತಿರಲಿಲ್ಲ. ನಮ್ಮ ಸಿಲ್ಕ್ ವೇಸ್ಟಿನಲ್ಲಿ ಹೊರ ದೇಶಗಳ ಸಿಲ್ಕ್ ವೇಸ್ಟಿನಲ್ಲಿರತಕ್ಕ ರೇಷ್ಮೆ ಅಂಶಕ್ಕಿಂತ ಹೆಚ್ಚು ರೇಷ್ಮೆ ಅಂಶವಿದೆ. ಆದರೆ ಈ ಸಿಲ್ಕ್ ವೇಸ್ಟ್ ವ್ಯಾಪಾರದಿಂದ ನಮ್ಮ ದೇಶಕ್ಕೆ ಕೆಟ್ಟಹೆಸರು ಏತಕ್ಕೆ ಬಂತು ! ನಮ್ಮ ದೇಶದ ಸಿಲ್ಕ್ ವೇಸ್ಟನ್ನು ಹೊರಗಿನವರು ಕೇಳದಂತೆ ಏಕೆ ಆಯಿತು ಎಂದರೆ 1948 ರಿಂದೀಚೆಗೆ ವ್ಯಾಪಾರಗಾರರಲ್ಲಿ ಹೆಚ್ಚಿನ ಪೈಪೋಟಿಯುಂಟಾಗಿ ಹೊರ ದೇಶಗಳಿಗೆ ರಫ್ತು ಮಾಡುವಾಗ ಅನೇಕ ಉಪಯೋಗಕ್ಕೆ ಬಾರದಂಥ ಪದಾರ್ಥಗಳನ್ನು ಬೆರಕೆ ಹಾಕಿ ಕಳಿಸಿದ್ದರಿಂದ ಆಯಿತು. 1951-52 ರಲ್ಲಿ ಹೀಗೆ ಒಂದು ಕನ್‌ಸೈನ್‌ಮೆಂಟನ್ನು ಹೊರದೇಶದವರು ತೆಗೆದುಕೊಂಡರು. ಈ ವೇಸ್ಟನ್ನು ಉಪಯೋಗಿಸಿದ್ದರಿಂದ ಅವರ ಯಂತ್ರೋಪಕರಣಗಳು ಕೆಟ್ಟುಹೋಗಿ ಅದನ್ನು ಸರಿಮಾಡಲು ಎರಡು ವರ್ಷಗಳ ಕಾಲ ಮಿಲ್ಲನ್ನು ಮುಚ್ಚಬೇಕಾಗಿ ಬಂತು. ಗೆಣಸು ಗಡ್ಡೆಗಳನ್ನು ಬೇಯಿಸಿ ಮರಳನ್ನು ಬೆರಸಿ ತುಳಿಯುವುದರಿಂದ ಸಿಲ್ಕ್ ವೇಸ್ಟ್ ಇದ್ದಹಾಗೆ ಇರುತ್ತದೆ. ಇದು ವೇಸ್ಟ್ ಇದ್ದಹಾಗೆ ಇರುವುದರಿಂದ ಚೆನ್ನಾಗಿ ಅಂಟಿಕೊಳ್ಳುತ್ತದೆ. ಇದರ ಜೊತೆಗೆ ಮರಳು ಸೇರಿಸಿರುವುದರಿಂದ, ಸಿಲ್ಕ್ ವೇಸ್ಟ್ ಎಂದು ಕಳಿಸಿದ್ದ ಪದಾರ್ಥ ಅಂಟಿಕೊಂಡು ಮರಳು ಸೇರಿಕೊಂಡು ಯಂತ್ರಗಳೆಲ್ಲ ಕೆಟ್ಟುಹೋದುವು. ಅವುಗಳನ್ನೆಲ್ಲ replace ಮಾಡಿ ಕೆಲಸ ಮಾಡುವ ರೂಪಕ್ಕೆ ತರಬೇಕಾದರೆ, ಎರಡು ವರ್ಷಕಾಲ ಬೇಕಾಯಿತು. 1955 ರವರೆಗೂ ನಮ್ಮ ವೇಸ್ಟಿಗೆ ವ್ಯಾಪಾರವಿಲ್ಲದೆ ನಮ್ಮ ಕೈಗಾರಿಕಾಗಾರರು ಬಹಳ ನಷ್ಟವನ್ನು ಅನುಭವಿಸಬೇಕಾಗಿ ಬಂತು. ಈ ತೆರದ ತೊಂದರೆಯಾಗಿರತಕ್ಕದ್ದು ಕೇವಲ ಮೂರು ನಾಲ್ಕು ಮಂದಿ. ಇದರಿಂದ ನಮ್ಮ ವ್ಯಾಪಾರವೂ ಕೆಟ್ಟು ನಮ್ಮ ದೇಶಕ್ಕೆ ಕೆಟ್ಟ ಹೆಸರೂ ಬಂತು. ನಮ್ಮ ವ್ಯಾಪಾರವೂ ನಿಲ್ಲುವುದಕ್ಕೆ ಕಾರಣವಾಯಿತು. ಮತ್ತೆ 1957ರಲ್ಲಿ ನಮ್ಮಿಂದ ಸಿಲ್ಕ್ ವೇಸ್ಟನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಂಡುಕೊಂಡು ಹೋದರು. ನಮ್ಮ ದೇಶದ ಮಾಲಿಗೆ ಒಳ್ಳೆಯ ಧಾರಣೆಯನ್ನು ಕೊಟ್ಟರು. ಆದರೂ ಸಹಿತ ಇಂಥ ನ್ಯೂನತೆಗಳಿಂದ, ನಮ್ಮ ದೇಶದ ಸಂಪರ್ಕ ಮತ್ತು ನಮ್ಮ ದೇಶದೊಡನೆ ವ್ಯಾಪಾರವನ್ನು ನಿಲ್ಲಿಸಬೇಕಾಗಿ ಬಂತು. ಇಂಥ ಕೆಟ್ಟಚಾಳಿಯನ್ನು ತಪ್ಪಿಸಿ. ನಮ್ಮ ದೇಶದ ಘನತೆ ಗೌರವಗಳನ್ನು ಉಳಿಸಿಕೊಳ್ಳಲು ಸರ್ಕಾರ ಸ್ವಲ್ಪಮಟ್ಟಿಗಾದರೂ ಈ ವಿಷಯದಲ್ಲಿ ಶ್ರದ್ಧೆ ವಹಿಸಬೇಕಾಗಿತ್ತು.

Mr. CHAIRMAN.—The Honourable Member has spoken for an hour and a half; how much more time does he want ?

Sri J. VENKATAPPA.—Half an hour.

Mr. CHAIRMAN—Then he can continue to morrow. The House now rises for the day and will meet to-morrow at 8-30 A.M.

The House adjourned at Six of the Clock to meet again at Thirty Minutes past Eight of the Clock on Tuesday, the 21st April 1959.

WD 748—GPB—900—19-7-1960.